13 September 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 269 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಭಾವನಾಂತರಂಗ

ಅಂತರಂಗದ ಮಾತು
ನ್ಯಾಯದೇವತೆಯ ಮಾತಿದ್ದಂತೆ! ಹೀಗಾಗಿ
ಅಂತರಂಗದ ಮಾತುಗಳು ಪರಿಶುದ್ಧ!

-ಸ್ನೇಹಾ ಆನಂದ್

ರಾಮನಗರ: ಕೋಟಾ ನೋಟು ತಯಾರಿಕೆ: 13 ಆರೋಪಿಗಳ ಬಂಧನ ಪುಟ ಸಂ. 2

ಎಸ್‌ಐಆರ್ ಇದುವರೆಗೆ 6303 ಮಂದಿಗೆ ನೋಟಿಸ್ ಜಾರಿ ಪುಟ ಸಂ. 3

ಮನೆ ಬಾಗಿಲಿಗೆ ಸರ್ಕಾರ: ಕೈಲಾಂಚದಲ್ಲಿ ಪ್ರಜಾಸೇವೆ ಆಂದೋಲನ ಪುಟ ಸಂ. 4

ಕೆಪಿಎಸ್‌ಸಿ ಡೀಲ್: ಶಾಂತಾ ಕಿಂಗ್‌ಪಿನ್

ಪ್ರತಿ ಹುದ್ದೆಗೆ 1.5 ಕೋಟಿ ವಸೂಲಿ: ಸಿಐಡಿ ತನಿಖೆಯಲ್ಲಿ ಬಹಿರಂಗ

ಕಲಬುರಗಿ: ಕೆಪಿಎಸ್‌ಸಿಯಿಂದ 2023–24 ರಲ್ಲಿ ನಡೆದ ಕೆಎಎಸ್ ಪರೀಕ್ಷೆ ಅಕ್ರಮ ನೇಮಕಾತಿ ಹಗರಣದಲ್ಲಿ ಕೋಟಿ ಕೋಟಿ ಹಣ ಡೀಲ್ ಮಾಡಿರುವುದು ಬೆಳಕಿಗೆ ಬಂದಿದೆ. ಈ ಅಕ್ರಮ ಪ್ರಕರಣದಲ್ಲಿ ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿಯೇ ಕಿಂಗ್‌ಪಿನ್ ಎಂಬುದು ಸಿಐಡಿ ತನಿಖೆಯಲ್ಲಿ ಬಹಿರಂಗವಾಗಿದೆ. ಈ ಬಗ್ಗೆ ಸಿಐಡಿ ಅಧಿಕಾರಿಗಳಿಗೆ ಮಹತ್ವದ ಸಾಕ್ಷ್ಯಗಳು ಲಭ್ಯವಾಗಿವೆ ಎನ್ನಲಾಗಿದೆ.

ಕೆಪಿಎಸ್‌ಸಿಯ ಪಶುವೈದ್ಯಾಧಿಕಾರಿ ನೇಮಕಾರಿ ಹಗರಣದ ಬೆನ್ನಲ್ಲೇ ಕೆಎಎಸ್ ಪರೀಕ್ಷೆಯ ಕಳ್ಳಾಟ ಬಹಿರಂಗವಾಗಿದೆ. ರಾಜ್ಯದಲ್ಲಿ ಕೆಪಿಎಸ್‌ಸಿ ಕರಾಳ ಕಥೆಗಳು ಒಂದೊಂದೇ ರಿವೀಲ್ ಆಗುತ್ತಿವೆ. ಪಿಎಸ್‌ಐ ನೇಮಕಾತಿ ಅಕ್ರಮ ಜೋರಾಗಿ ಸದ್ದು ಮಾಡಿದ್ದಾಯ್ತು. ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ಡೀಲ್ ಮುಗಿಸಿದ್ದು ಆಯ್ತು. ಪಶುವೈದ್ಯಾಧಿಕಾರಿ ಅಕ್ರಮದ ತನಿಖೆ ಮಧ್ಯೆ 2023–24ರ ಸಾಲಿನಲ್ಲಿ 384 ಕೆಎಎಸ್ ಪರೀಕ್ಷೆಗಳಲ್ಲಿ ಡೀಲ್ ನಡೆದಿರುವ ಬಗ್ಗೆ ದೂರು ದಾಖಲಾಗಿದೆ. ಬೆಂಗಳೂರಿನಲ್ಲಿ ದೂರು ದಾಖಲು ಬೆನ್ನಲ್ಲೇ ಸಿಐಡಿ ಅಧಿಕಾರಿಗಳು ತನಿಖೆ ತೀವ್ರಗೊಳಿಸಿದ್ದಾರೆ.

ಕೆಎಎಸ್ ಗೆ ನೇಮಕವಾಗಿ ಅಂತಿಮ ಪಟ್ಟಿಗಾಗಿ ಕಾಯುತ್ತಿದ್ದ ಕಲಬುರಗಿ ಮೂಲದ ಮಹಿತಾ ಮನೆ ಮೇಲೆ ಸಿಐಡಿ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಕೆಎಎಸ್ ಪರೀಕ್ಷಾ ಅಕ್ರಮದ ಕುರಿತು ಹಲವು ಮಾಹಿತಿ ಸಿಕ್ಕಿದೆ. ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿ ಅಭ್ಯರ್ಥಿಗಳ ಜೊತೆ ಡೀಲ್ ನಡೆಸಿದ್ದಾರೆ. ಪ್ರತಿ ಹುದ್ದೆಗೆ ಒಂದೂವರೆ ಕೋಟಿವರೆಗೂ ಪಡೆದ ಬಗ್ಗೆ ಸಿಐಡಿ ತಂಡ ಮಹತ್ವದ ದಾಖಲೆಗಳನ್ನು ಕಲೆಹಾಕಿದೆ.

ಪರಾರಿಯಾದ ಆರೋಪಿ ಬಂಧನಕ್ಕೆ ಸಿಐಡಿ ಶೋಧ

ಕೆಎಎಸ್ ಅಕ್ರಮ ನೇಮಕಾತಿ ಪ್ರಕರಣದ ಕಿಂಗ್ ಪಿನ್ ಶಾಂತಾ ಹೊಸಮನಿ ಬಂಧನಕ್ಕೆ ಸಿಐಡಿ ತೀವ್ರ ಶೋಧ ನಡೆಸಿದೆ. ಕಲಬುರಗಿ–ಬೆಂಗಳೂರು ಸೇರಿದಂತೆ ಪಕ್ಕದ ರಾಜ್ಯಗಳಿಗೆ ತೆರಳಿ ಶಾಂತಾ ಹೊಸಮನಿ ಬಂಧನಕ್ಕೆ ಸಿಐಡಿ ತೀವ್ರ ಶೋಧ ಪುಟ 2ಕ್ಕೆ

ಇಡಿಯಿಂದ ಚಾರಿತ್ರ್ಯ ಹರಣ ಕಾರ್ಯ: ಮಲ್ಯ

ನವದೆಹಲಿ: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮೇಲೆ ಇಡಿ ದಾಳಿ ನಡೆಸಿರುವ ಮಾಹಿತಿಯನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ಉದ್ಯಮಿ ವಿಜಯ್ ಮಲ್ಯ ಅವರು, ಜಾರಕಿಹೊಳಿ ಪರ ಬ್ಯಾಟ್ ಬೀಸಿದ್ದಾರೆ.

ಜಾರಿ ನಿರ್ದೇಶನಾಲಯ ಇದನ್ನು ದೊಡ್ಡ ಸಾಧನೆಯಂತೆ ಬಿಂಬಿಸುತ್ತಿದೆ. ಆದರೆ, ಯಾವುದೇ ದೋಷಾರೋಪ ಪಟ್ಟಿ ಇಲ್ಲ. ವಿಚಾರಣೆಯೂ ಇಲ್ಲ. ಸಾರ್ವಜನಿಕವಾಗಿ ಕೇವಲ ಚಾರಿತ್ರ್ಯ ಹರಣ ನಡೆಯುತ್ತಿದೆ. ಬೇರೆ ಯಾವುದೇ ದೇಶದಲ್ಲಿ ಹೀಗೆ ನಡೆಯುವುದಿಲ್ಲ. ದಯವಿಟ್ಟು ನೀವೇ ಸ್ವತಃ ಯೋಚಿಸಿ' ಎಂದು ಬರೆದುಕೊಂಡಿದ್ದಾರೆ.

ಇಡಿಗೆ ದೂರು ಕೊಟ್ಟವರು ಗೊತ್ತಿದೆ

ಸಿಎಂ ಡಿಕೆಶಿಗೆ ಮಾಹಿತಿ ನೀಡಿದ್ದೇನೆ: ಸಚಿವ ಜಾರಕಿಹೊಳಿ ಹೇಳಿಕೆ

ಬೆಂಗಳೂರು: ನನ್ನ ವಿರುದ್ಧ ಕೇಂದ್ರ ತನಿಖಾ ಸಂಸ್ಥೆಗೆ ದೂರು ನೀಡಿದವರು ಯಾರು ಎಂಬುದು ನನಗೆ ತಿಳಿದಿದೆ. ಅಲ್ಲದೆ, ಈ ವಿಷಯವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಮನಕ್ಕೆ ತಂದಿದ್ದೇನೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಮಾಧ್ಯಮಗಳ ಜೊತೆ ಶನಿವಾರ ಮಾತನಾಡಿದ ಅವರು, ದೂರು ನೀಡಿದವರು ಯಾರೆಂದು ಮೊದಲೇ ನನಗೆ ಗೊತ್ತಿತ್ತು. ದೂರು ನೀಡುವುದರಲ್ಲಿ ತಪ್ಪೇನೂ ಇಲ್ಲ. ಹಾಗೆ ಮಾಡುವ ಹಕ್ಕು ಎಲ್ಲರಿಗೂ ಇದೆ. ಆರೋಪಗಳನ್ನು ಮಾಡಲು ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವಿದೆ ಎಂದು ಜಾರಕಿಹೊಳಿ ಹೇಳಿದರು.

ದೂರುದಾರರ ಗುರುತನ್ನು ಬಹಿರಂಗಪಡಿಸಲಿಲ್ಲ. ದೂರುದಾರ ಆಡಳಿತಾರೂಢ ಕಾಂಗ್ರೆಸ್ ಪಕ್ಷದವರೇ ಅಥವಾ ಅಲ್ಲವೇ ಎಂಬುದನ್ನು ಖಚಿತಪಡಿಸದೆ ಅಥವಾ ನಿರಾಕರಿಸದೆ ಮಾತನಾಡಿದರು. ಆರೋಪ ಮಾಡಲು ಮತ್ತು ದೂರು ಸಲ್ಲಿಸಲು ಪ್ರತಿಯೊಬ್ಬರಿಗೂ ಹಕ್ಕಿದೆ ಎಂದರು.

ಇಡಿ ಶೋಧ ಪುಟ 2ಕ್ಕೆ

ಮಸೀದಿ ಮುಂದೆ ಮೆರವಣಿಗೆ ನಡೆಸಿದರೆ ಏನ್ ಆಗುತ್ತೆ ಗೊತ್ತಾ?

ಮೈಸೂರು: ಮಸೀದಿ ಮುಂದೆ ಹೋಗಿ ಪಟಾಕಿ ಸಿಡಿಸಿದರೆ ಏನ್ ಆಗುತ್ತೆ ಗೊತ್ತಾ? ಮಸೀದಿ ಮುಂದೆಯೇ ಗಣೇಶ ಮೆರವಣಿಗೆ ಹೋಗಬೇಕು ಎನ್ನುವ ಆಗಿಲ್ಲ. ಎಂದು ಗಣೇಶ ಹಬ್ಬ ಮಾಡುವ ಯುವಕರಿಗೆ ತಿ. ನರಸೀಪುರ ಇನ್ಸ್‌ಪೆಕ್ಟರ್ ಧನಂಜಯ ಎಚ್ಚರಿಕೆ ನೀಡಿರುವ ವಿಡಿಯೋ ವೈರಲ್ ಆಗಿದೆ.

ಗಣೇಶ ಪ್ರತಿಷ್ಠಾಪನೆ ಹಾಗೂ ವಿಸರ್ಜನೆ ವಿಚಾರದಲ್ಲಿ ಯುವಕರ ಗುಂಪಿಗೆ ಈ ವಾರ್ನಿಂಗ್ ನೀಡಿದ್ದಾರೆ. ನಾವು ಹಾಕಿಕೊಡುವ ಮಾರ್ಗದಲ್ಲೇ ಮೆರವಣಿಗೆ ಹೋಗಬೇಕು. ಮಸೀದಿ ಮುಂದೆ ಮೆರವಣಿಗೆ ಹೋಗುವಂತಿಲ್ಲ. ಅಕಸ್ಮಾತ್ ಹೋದರೆ ಹೇಳಲ್ಲ ಮಾಡಿ ತೋರಿಸ್ತೀನಿ ಎಂದು ಹೆದರಿಸಿದ್ದಾರೆ.

ಈ ಬಾರಿ ಮಸೀದಿ ಮುಂದೆ ಪಟಾಕಿ ಹೊಡೆದರೆ ಗ್ರಹಚಾರ ಬಿಡಿಸ್ತೇನೆ. ಅಲ್ಲಿ ನಾವು ಭದ್ರತೆ ಹಾಕ್ತೀವಿ. ನೀವು ಮೆರವಣಿಗೆ ಮಾಡುವ ರೂಟ್ ಕೊಟ್ಟು ಗಣಪತಿ ಕೂರಿಸಬೇಕು ಎಂಬ ಎಚ್ಚರಿಕೆ ಕೊಟ್ಟಿದ್ದಾರೆ. ಇದು ವ್ಯಾಪಕ ವಿರೋಧಕ್ಕೆ ಕಾರಣವಾಗಿದೆ. ಬಿಜೆಪಿ ನಾಯಕರು ಇನ್ಸ್‌ಪೆಕ್ಟರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ದೂರುದಾರ ಕಾಂಗ್ರೆಸ್ಸಿಗ, ಬಿಜೆಪಿಯೂ ಹೌದು!

ದೂರುದಾರ ವ್ಯಕ್ತಿಗೆ ಕಾಂಗ್ರೆಸ್‌ನೊಂದಿಗೆ ಸಂಬಂಧವಿದೆ. ಆದರೆ ಮತದಾರರ ಪಟ್ಟಿಯಲ್ಲಿ ಅವರು ಬಿಜೆಪಿ ಪಕ್ಷಕ್ಕೆ ಸೇರಿದವರಾಗಿದ್ದಾರೆ. ಇದು 50:50 ಸ್ಥಿತಿಯಲ್ಲಿದೆ. ಈ ಬಗ್ಗೆ ಏನನ್ನೂ ಹೇಳುವುದು ಕಷ್ಟಕರ ವಿಷಯ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ದೂರುದಾರರು ಸ್ವತಃ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿರುವ ಸಾಧ್ಯತೆ ಮತ್ತು ಅವರ ನಿಜವಾದ ಉದ್ದೇಶದ ಕುರಿತು ಕೇಳಲಾದ ಪ್ರಶ್ನೆಗೆ, ಮುಖ್ಯಮಂತ್ರಿಗಳು ಈ ವಿಷಯವನ್ನು ಪರಿಶೀಲಿಸುತ್ತಾರೆ. ದೂರು ನೀಡಿದವರು ನಮ್ಮ ಪಕ್ಷದವರು ಎಂದು ನಾನು ಹೇಳಿಲ್ಲ. ಅವರು ನಮ್ಮ ಪಕ್ಷದವರಾಗಿರಬಹುದು ಅಥವಾ ಇಲ್ಲದಿರಬಹುದು. ಈ ವಿಷಯವನ್ನು ಪರಿಶೀಲಿಸುವಂತೆ ಸಿಎಂಗೆ ಹೇಳಿದ್ದೇನೆ ಅಷ್ಟೇ ಎಂದು ಅವರು ಹೇಳಿದರು.

ಮುಂದಿನ ದಿನಗಳಲ್ಲಿ ಸತ್ಯಾಂಶಗಳು ಮತ್ತು ದಾಖಲೆಗಳೊಂದಿಗೆ ತನಿಖೆಯನ್ನು ಎದುರಿಸುವುದಾಗಿ ಹಾಗೂ ಪ್ರಕರಣವನ್ನು ಕಾನೂನುಬದ್ಧವಾಗಿ ನಿಭಾಯಿಸುವುದಾಗಿಯೂ ಹೇಳಿದರು.

ಜಾರಕಿಹೊಳಿ ವಿರುದ್ಧ ತನಿಖೆಗೆ ಲೋಕಾಯುಕ್ತಕ್ಕೆ ಇಡಿ ಪತ್ರ?

ಭ್ರಷ್ಟಾಚಾರ ಪ್ರಕರಣ ದಾಖಲಿಸಿ ತನಿಖೆ ನಡೆಸಲು ಸಲಹೆ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿರುವ ಜಾರಿ ನಿರ್ದೇಶನಾಲಯ ಪ್ರಕರಣದ ಕುರಿತು ತನಿಕೆ ನಡೆಸುವಂತೆ ಲೋಕಾಯುಕ್ತಕ್ಕೆ ಪತ್ರ ಬರೆಯಲು ಮುಂದಾಗಿದೆ ಎನ್ನಲಾಗಿದೆ.

ಪಿಡಬ್ಲ್ಯುಡಿ ಇಲಾಖೆಯಲ್ಲಿ ಅಕ್ರಮ ಹಾಗೂ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಗಳ ಹಿನ್ನೆಲೆ ತನಿಖೆ ನಡೆಯುತ್ತಿದೆ. ಎಡಿಜಿಪಿ ಕಂಪನಿಯಿಂದ ಕಿಕ್‌ಬ್ಯಾಕ್ ಪಡೆದಿರುವ ಆರೋಪ ಕೇಳಿಬಂದಿದೆ. ಈ ಹಿನ್ನೆಲೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವಂತೆ ಸೂಚನೆ ನೀಡಲಾಗಿದೆ. ಆದರೆ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ನೇರವಾಗಿ ತನಿಖೆ ನಡೆಸುವ ಅಧಿಕಾರ ಇಡಿಗೆ ಇಲ್ಲದ ಕಾರಣ ಲೋಕಾಯುಕ್ತಕ್ಕೆ ಪತ್ರ ಬರೆದು ತನಿಖೆ ನಡೆಸುವಂತೆ ಸೂಚಿಸಲಿದೆ ಎಂದು ತಿಳಿದುಬಂದಿದೆ.

ಅಲ್ಲದೆ, ಕರ್ನಾಟಕಕ್ಕೆ ಸಂಬಂಧಿಸಿದ ಹಲವು ಪ್ರಮುಖ ಪ್ರಕರಣಗಳ ತನಿಖೆಯ ಪ್ರಗತಿ ಪರಿಶೀಲಿಸಲು ಇಡಿ ನಿರ್ದೇಶಕ ರಾಹುಲ್ ನವೀನ್ ಬೆಂಗಳೂರಿಗೆ ಆಗಮಿಸಲಿದ್ದಾರೆ. ಭಾನುವಾರದಿಂದ 2 ದಿನಗಳ ಕಾಲ ಕರ್ನಾಟಕದಲ್ಲಿ ನಡೆಯುತ್ತಿರುವ ಪ್ರಮುಖ ಪ್ರಕರಣಗಳ ತನಿಖೆಯ ಪ್ರಗತಿ ಪರಿಶೀಲನೆ ನಡೆಯಲಿದೆ.

ಕೆಪಿಎಸ್‌ಸಿ ನೇಮಕಾತಿ ಪ್ರಕರಣ, ಸತೀಶ್ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಪ್ರಕರಣ, ಮುಡಾ ಪ್ರಕರಣ ಹಾಗೂ ವಾಲ್ಮೀಕಿ ಪ್ರಕರಣ ಸೇರಿದಂತೆ ಹಲವು ಪ್ರಕರಣಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ತನಿಖೆಯ ಮುಂದಿನ ಹಂತಗಳ ಬಗ್ಗೆ ರಾಹುಲ್ ನವೀನ್ ಪರಿಶೀಲನೆ ನಡೆಸಲಿದ್ದಾರೆ ಎನ್ನಲಾಗಿದೆ.

ಜಾರಕಿಹೊಳಿ ಮನೆಯಲ್ಲಿ 15 ಲಕ್ಷ ವಿದೇಶಿ ಹಣ ಪತ್ತೆ

ಬೆಂಗಳೂರು: ಸಚಿವ ಸತೀಶ್ ಜಾರಕಿಹೊಳಿ ಮನೆಯಲ್ಲಿ 15 ಲಕ್ಷ ರೂ. ಮೌಲ್ಯದ ವಿದೇಶಿ ಹಣ ಜಾರಿ ನಿರ್ದೇಶನಾಲಯದ ದಾಳಿ ಸಂದರ್ಭದಲ್ಲಿ ಪತ್ತೆ ಆಗಿದೆ.

ವಿದೇಶದಲ್ಲಿ ಅಕ್ರಮವಾಗಿ ಹಣ ಹೂಡಿಕೆ ಆರೋಪ ಹಿನ್ನೆಲೆಯಲ್ಲಿ ಸತೀಶ್ ಜಾರಕಿಹೊಳಿ ಮನೆ ಮೇಲೆ ಇ.ಡಿ ದಾಳಿ ನಡೆಸಿತ್ತು. ದಾಳಿ ವೇಳೆ ವಿದೇಶಿ ಹಣ ಪತ್ತೆಯಾಗಿದೆ. ದಾಖಲೆ ಇಲ್ಲದ 15 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ಸಿಕ್ಕಿದೆ. ಇದರ ಫೋಟೊವನ್ನು ಇ.ಡಿ ರಿಲೀಸ್ ಮಾಡಿದೆ. 5 ದೇಶಗಳ ಕರೆನ್ಸಿ ಪತ್ತೆಯಾಗಿದೆ. ಅಮೆರಿಕಾದ ಡಾಲರ್, ಮಲೇಷಿಯಾ ರಿಂಗೆಟ್, ಚೈನೀಸ್ ಯುವಾನ್, ಯುರೋ ಕರೆನ್ಸಿ ಮತ್ತೆ ದುಬೈನ ದಿರಹಂ ಕರೆನ್ಸಿಯನ್ನು ಇಡಿ ವಶಕ್ಕೆ ಪಡೆದಿದೆ.

ಜೈಲಿನ ಟಿವಿಯಲ್ಲೂ ಸೆಕ್ಸ್ ವಿಡಿಯೋ ವೀಕ್ಷಿಸಿದ್ದ ಪ್ರಜ್ವಲ್

ಬೆಂಗಳೂರು: ಕಾರಾಗೃಹದಲ್ಲಿ ಮೊಬೈಲ್ ಬಳಸಿ ಸಿಕ್ಕಿಬಿದ್ದಿದ್ದ ಪ್ರಜ್ವಲ್ ರೇವಣ್ಣ ಬಳಿಯಿದ್ದ ಪೆನ್‌ಡ್ರೈವ್‌ನಲ್ಲಿ 100ಕ್ಕೂ ಹೆಚ್ಚು ಸೆಕ್ಸ್ ವಿಡಿಯೋಗಳು ಪತ್ತೆಯಾಗಿವೆ. ಜೈಲಿನ ಟಿವಿಯಲ್ಲಿಯೇ ಸೆಕ್ಸ್ ವಿಡಿಯೋ ನೋಡುತ್ತಿದ್ದ ವಿಚಾರ ಬೆಳಕಿಗೆ ಬಂದಿದೆ.

ಸೆಲ್‌ನಲ್ಲಿ ಪತ್ತೆಯಾಗಿದ್ದ ಪೆನ್‌ಡ್ರೈವ್‌ನಲ್ಲಿ ನೂರಾರು ಅಶ್ಲೀಲ ವಿಡಿಯೋಗಳು ಇರುವುದಾಗಿ ಎಫ್‌ಎಸ್‌ಎಲ್ ವರದಿಯಲ್ಲಿ ತಿಳಿಸಿದೆ. ಅಲ್ಲದೇ ಕೈದಿಗಳ ಬ್ಯಾರಕ್‌ನಲ್ಲಿ ಅಳವಡಿಸಲಾಗಿದ್ದ ಟಿವಿಗೆ ಪೆನ್‌ಡ್ರೈವ್ ಹಾಕಿ ಪ್ರಜ್ವಲ್ ಈ ವೀಡಿಯೋಗಳನ್ನು ವೀಕ್ಷಿಸಿರುವುದು ತನಿಖೆಯಿಂದ ತಿಳಿದುಬಂದಿದೆ. ಆದರೆ ಈ ಪೆನ್‌ಡ್ರೈವ್ ಅನ್ನು ಯಾವ ಸಮಯದಲ್ಲಿ ಬಳಸಲಾಗಿದೆ ಎಂಬುದನ್ನು ಖಚಿತಪಡಿಸಲು ಪೊಲೀಸರು ಮತ್ತೆ ಎಫ್‌ಎಸ್‌ಎಲ್ ತಜ್ಞರ ಸಹಾಯ ಕೋರಿದ್ದಾರೆ.

ಖಾಸಗಿ ಶಾಲೆ ಶಿಕ್ಷಕರಿಗೂ ಪ್ರಶಸ್ತಿ

ಸರ್ಕಾರದ ಮಟ್ಟದಲ್ಲಿ ನಿರ್ಧಾರ: ಸಚಿವ ಮಧು ಬಂಗಾರಪ್ಪ

ಬೆಂಗಳೂರು: ರಾಜ್ಯದ ಖಾಸಗಿ ಶಾಲೆಗಳ ಉತ್ತಮ ಶಿಕ್ಷಕರನ್ನೂ ರಾಜ್ಯ ಮಟ್ಟದ ಶಿಕ್ಷಕ ಪ್ರಶಸ್ತಿಗೆ ಪರಿಗಣಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆಯುತ್ತಿದೆ. ಶೀಘ್ರವೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಖಾಸಗಿ ಶಾಲೆಗಳ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಖಾಸಗಿ ಶಾಲೆಗಳ ಒಕ್ಕೂಟ ಸಲ್ಲಿಸಿರುವ ವಿವಿಧ ಬೇಡಿಕೆ ಸರ್ಕಾರದ ಗಮನದಲ್ಲಿದೆ. ಖಾಸಗಿ ಶಾಲೆಗಳು ಸರ್ಕಾರಕ್ಕೆ ಹಣ ಪಾವತಿಸಲು ಸಿದ್ಧವಿದ್ದು, ಸರ್ಕಾರಿ ಪಠ್ಯಪುಸ್ತಕಗಳನ್ನು ನೀಡುವಂತೆ ಮನವಿ ಮಾಡಿರುವ ವಿಚಾರ ಪುಟ 2ಕ್ಕೆ

'ಅಕ್ಷಯ' ಜಾರಿಗೆ ಚಿಂತನೆ

ಎಸ್.ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭ ಸರ್ಕಾರಿ ಶಾಲೆಗಳ ಮಕ್ಕಳ ಹಾಜರಾತಿ ಹೆಚ್ಚಿಸುವ ಉದ್ದೇಶದಿಂದ 'ಅಕ್ಷಯ' ಕಾರ್ಯಕ್ರಮ ಜಾರಿಗೆ ತಂದಿದ್ದರು ಎಂದು ಸ್ಮರಿಸಿದರು. ಇಂತಹ ಕಾರ್ಯಕ್ರಮ ರೂಪಿಸುವ ಅಗತ್ಯವಿದೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು. ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಒಂದು ಕೋಟಿಗೂ

ದಸರಾದಲ್ಲಿ ಕಂಬಳ: ಯದುವೀರ್ ವಿರೋಧ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ವಿರೋಧದ ನಡುವೆಯೂ ರಾಜ್ಯ ಸರ್ಕಾರ ಕಂಬಳ ಕ್ರೀಡೆಯನ್ನು ನಡೆಸುತ್ತಿದೆ. ಇದು, ಮೈಸೂರು ಮತ್ತು ಕರಾವಳಿ ಜನರ ನಡುವೆ ಭಿನ್ನಾಭಿಪ್ರಾಯ ಮೂಡಿಸುವ ಪ್ರಯತ್ನ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪಿಸಿದರು.

ನಗರದಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಂಬಳಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಮೈಸೂರು ದಸರಾದಲ್ಲಿ ನಡೆಸಬಾರದು ಎಂಬುದು ನಮ್ಮ ನಿಲುವು. ವಿವಿಧ ಸಂಘ, ಸಂಸ್ಥೆಗಳಿಂದಲೂ ವಿರೋಧವಿದೆ. ಇದ್ಯಾವುದಕ್ಕೂ ಸರ್ಕಾರ ಮನ್ನಣೆ ನೀಡದಿರುವುದು ಖಂಡನೀಯ ಎಂದರು.

ದಸರಾದಲ್ಲಿ ಚಲನಚಿತ್ರೋತ್ಸವ ರದ್ದುಪಡಿಸಿರುವುದು ಖಂಡನೀಯ. ಎಲ್ಲರೂ ಚಲನಚಿತ್ರ ನೋಡುತ್ತಿದ್ದರು. ಹೊಸ ಪ್ರೇಕ್ಷಕರು ಮತ್ತು ನಿರ್ದೇಶಕರಿಗೆ ಅವಕಾಶ ಸಿಗುತ್ತಿತ್ತು. ಅದನ್ನು ಕಸಿದುಕೊಂಡಿರುವುದು ಸರಿಯಲ್ಲ ಎಂದು ಹೇಳಿದರು.

ಕಸ್ತೂರಿ ರಂಗನ್ ವರದಿ ವಿರೋಧಿಸಿ ಕೊಡಗಿನಲ್ಲಿ ನಡೆದಿರುವ ಪ್ರತಿಭಟನೆ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯ ಸರ್ಕಾರ ಜನರ ಗ್ರಾಮಸಭೆಗಳನ್ನು ನಡೆಸಿ ಅಭಿಪ್ರಾಯ ಸಂಗ್ರಹಿಸಬೇಕು. ವರದಿ ಸಲ್ಲಿಸಬೇಕು. ಕಸ್ತೂರಿ ರಂಗನ್ ವರದಿ ವಿಚಾರದಲ್ಲಿ ಪರಿಹಾರ ಬೇಕಾಗಿದೆ. ಎಂದು ಆಗ್ರಹಿಸಿದರು.

ಬಿಜೆಪಿ ನಾಯಕರ ಕೊಬ್ಬು ಕರಗಿಸಲು ಪಾದಯಾತ್ರೆ: ನಾಗೇಂದ್ರ

ಬಳ್ಳಾರಿ: ಬಿಜೆಪಿ ನಾಯಕರಿಗೆ ಕೂತು ಕೂತು ಕೊಬ್ಬು ಹೆಚ್ಚಾಗಿತ್ತು. ಈಗ ಅದನ್ನು ಕರಗಿಸಲು ಪಾದಯಾತ್ರೆ ಮಾಡಿದ್ದಾರೆ. ತಮ್ಮ ಕೊಲೆಸ್ಟ್ರಾಲ್, ಫ್ಯಾಟ್ ಕಡಿಮೆ ಮಾಡಲು ಪಾದಯಾತ್ರೆ ಮಾಡಿದ್ದಾರೆ ಎಂದು ಮಾಜಿ ಸಚಿವ ಬಿ.ನಾಗೇಂದ್ರ ವಾಗ್ದಾಳಿ ನಡೆಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮನೆಯಲ್ಲಿ

ರಾಮನಗರ: ಕೋಟಾ ನೋಟು ತಯಾರಿಕೆ: 13 ಆರೋಪಿಗಳ ಬಂಧನ

ರಾಮನಗರ: 500 ರೂ ಮುಖಬೆಲೆಯ ಕೋಟಾನೋಟುಗಳನ್ನು ತಯಾರಿಸುತ್ತಿದ್ದ ಎಲ್ಲಾ 13 ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ರಾಮನಗರದ ಸಂತೋಷ. ಜಿ.ಎಂ, ಮಾಯಗಾನಹಳ್ಳಿ ಗ್ರಾಮದ ಸಂಪತ್ ಕುಮಾರ್, ರಾಮನಗರದ ರಾಜೇಶ್.ಆರ್.ಎಸ್, ಪಾಂಡವಪುರದ ಸತೀಶ್.ಎಲ್, ಕನಕಪುರ ತಾಲ್ಲೂಕು ಕಲ್ಲಹಳ್ಳಿ ಗೇಟ್‌ನ ಶಿವರಾಜು, ಕನಕಪುರ ತಾಲ್ಲೂಕು ಹೊಸಕೋಟೆ ಗ್ರಾಮದ ಗೋವಿಂದ ರಾಜು, ಕನಕಪುರ ನಗರ ರೇಣು ಕಾರಾಜು, ಗುಂಡ್ಲುಪೇಟೆಯ ಆಶ್ರಫ್ ಆಲಿ, ಕನಕಪುರ ನಗರದ ನಾಗರಾಜು, ಕನಕಪುರ ತಾಲ್ಲೂಕು ಕಲ್ಲಹಳ್ಳಿ ಗ್ರಾಮದ ಮಂಜು, ಕೊಳ್ಳೆಗಾಲ ತಾಲ್ಲೂಕು ಹೊಸಆನಗಳ್ಳಿಯ ಚಂದ್ರಶೇಖರ್.ಎಂ, ಹೊಸಆನಗಳ್ಳಿಯ ಮಹೇಳ.ಪಿ. ಮತ್ತು ಮಲ್ಲಿಕ ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಹಣ ದ್ವಿಗುಣ-ತ್ರಿಗುಣ ಮಾಡಿಕೊಡುವ ಆಮಿಷವೊಡ್ಡುತ್ತಿದ್ದ ಆರೋಪಿಗಳು

ಕೋಟಾ ನೋಟು ತಯಾರಿಕೆ ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಅವರ ಮಾರ್ಗದರ್ಶನದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಜೇಂದ್ರ.ಡಿ.ಎಸ್ ಅವರ ನೇತೃತ್ವದಲ್ಲಿ ರಾಮನಗರ ಉಪವಿಭಾಗದ ಉಪಾಧೀಕರಕ ಬಿ.ಎನ್.ಶ್ರೀನಿವಾಸ್ ಅವರ ಮೇಲುಸ್ತುವಾರಿಯಲ್ಲಿ, ರಾಮನಗರ ಪುರ ವೃತ್ತ ನಿರೀಕ್ಷಕ ರಮೇಶ್.ಜಿ.ಪಿ ಹಾಗೂ ಐಜೂರು ಠಾಣೆ ಎಸ್‌ಐ1 ಚಾರ್ಜ್ ಪ್ರಕಾಶ್, ಎಸ್‌ಐ2 ಕೇಶವಮೂರ್ತಿ, ಸಿಬ್ಬಂದಿಗಳಾದ ಲೋಕೇಶ್, ಚನ್ನಪ್ಪ ಶೆಟ್ಟರ್, ಪಾಲನೇತ್ರ, ರಾಜೇಶ್, ಚನ್ನಬಸಪ್ಪ, ಹನುಮಂತಪ್ಪ, ಸೋಮನಾಥ ಹಿರೇಮಠ, ಚಾಲಕ ಸದಾನಂದ ತಂಡ ಯಶಸ್ವಿಯಾಗಿದೆ.

ಕೋಟಾ ನೋಟು ತಯಾರಿಕೆ ಹೇಗೆ?

ನಗರದ ಐಜೂರು ಪೊಲೀಸ್ ಠಾಣಾ ವ್ಯಾಪ್ತಿಯ ಶಾಂತಿಲಾಲ್ ಲೇ ಔಟ್‌ನ ಹಿಂಭಾಗದ ಬಡಾವಣೆಯಲ್ಲಿ ಎ1 ಆರೋಪಿ ಸಂತೋಷ್ ಎಂಬುವನಿಗೆ ಸೇರಿದ ಮನೆಯಲ್ಲಿ ಒಟ್ಟು 13 ಮಂದಿ ಕೋಟಾ ನೋಟು ತಯಾರಿಕೆ ಸಂಚು ರೂಪಿಸಿದ್ದರು. ಚಿಕ್ಕಪೇಟೆಯಿಂದ ಪೇಪರ್ ಖರೀದಿಸುತ್ತಿದ್ದ ಆರೋಪಿಗಳು, ಅಮೇಜಾನ್ ಮೂಲಕ ಸಿಲ್ವರ್ ನೈಟ್ರೇಟ್ ಹಾಗೂ ಇತರೆ ರಾಸಾಯನಿಕಗಳನ್ನು ಖರೀದಿಸುತ್ತಿದ್ದರು. ಸಿಲ್ವರ್ ನೈಟೇಟ್ ಮತ್ತು ಇತರ ರಾಸಾಯನಿಕಗಳನ್ನು ಹೆಚ್ಚಿದ ಪೇಪರ್‌ಮೇಲೆ ಅಸಲಿ ನೋಟಿನ ಛಾಯೆಯನ್ನು ಮೂಡಿಸುತ್ತಿದ್ದರು. ಅಸಲಿ ನೋಟಿನ ಅಳತೆಗೆ ಪೇಪರ್‌ಗಳನ್ನು ಕತ್ತರಿಸುತ್ತಿದ್ದರು. ಆನಂತರ ಅವುಗಳನ್ನು ಬಂಡಲ್ ಮಾಡಿ, ಫೋಟೋ ವೀಡಿಯೋ ಮೂಲಕ ತಮ್ಮ ಬಳಿ ಅಪಾರ ಪ್ರಮಾಣದ ಹಣ ಇದೆ. ತಮ್ಮ ಬಳಿ ಹಣ ತೊಡಗಿಸಿದರೆ, ಹಣವನ್ನು ದ್ವಿಗುಣ-ತ್ರಿಗುಣ ಮಾಡಿ ಕೊಡುತ್ತೇವೆ ಎಂದು ನಂಬಿದವರಿಗೆ ಮೋಸ ಮಾಡುವ ಉದ್ದೇಶದಲ್ಲಿ ಕೋಟಾ ನೋಟು ತಯಾರಿಸುತ್ತಿದ್ದರು ಎಂದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದ್ವಿಗುಣ-ತ್ರಿಗುಣದ ಆಸೆಗೆ ಇವರ ಬಳಿ ಅಸಲಿ ನೋಟುಗಳನ್ನು ಕೊಟ್ಟು ಹಣ ತೊಡಗಿಸಿದವರಿಗೆ ಹಣವನ್ನು ಹಿಂತಿರುಗಿಸದೆ ಪಲಾಯನ ಮಾಡುವ ಉದ್ದೇಶವೂ ಈ ಆರೋಪಿಗಳಲ್ಲಿ ಇತ್ತು. ಹೀಗೆ ಸ್ಥಳದಿಂದಲೇ ಪರಾರಿಯಾಗಲು ಸಿದ್ದರಿದ್ದ 7 ಮಂದಿ ಆರೋಪಿಗಳನ್ನು ಹಾಗೂ ಸಾಮಾಗ್ರಿಗಳನ್ನು ಪೊಲೀಸರು ಬಂಧಿಸಿ ತನಿಖೆಯನ್ನು ಮುಂದುವರೆಸಿದ್ದರು. ಈ ವೇಳೆ ತಲೆ ಮರೆಸಿಕೊಂಡಿದ್ದ ಆರೋಪಿಗಳಾದ ಮಹೇಳ ಪಿ, ಮಲ್ಲಿಕಾ ಮತ್ತು ಚಂದ್ರಶೇಖರ್.ಎಂ ಮತ್ತು ಇವರಿಗೆ ಸಹಕರಿಸುತ್ತಿದ್ದ ಮೂವರನ್ನು ಸೇರಿ ಪೊಲೀಸರು ಎಲ್ಲಾ 13 ಆರೋಪಿಗಳನ್ನು ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸುತ್ತಿದ್ದ ಆಟೋ, ಎರಡು ಮೊಬೈಲ್‌ಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಕೋಟಾ ನೋಟು ತಯರಿಸುವುದು ಕಾನೂನು ಬಾಹೀರ ಎಂಬ ಅರಿವಿದ್ದರೂ ಸಹ ಸುಲಭವಾಗಿ ಹಣ ಮಾಡುವ ಉದ್ದೇಶದಿಂದ ಈ ಕೃತ್ಯದಲ್ಲಿ ಭಾಗಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದ 13 ಮಂದಿಯನ್ನು ಬಂಧಿಸಲಾಗಿದೆ. ನ್ಯಾಯಾಲಯ ಎಲ್ಲ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ.

ಚಲನಚಿತ್ರೋತ್ಸವ ಪ್ರದರ್ಶನ ರದ್ದು ಖಂಡಿಸಿ ಪ್ರತಿಭಟನೆ

ಮೈಸೂರು: ದಸರಾ ಚಲನಚಿತ್ರೋತ್ಸವದಲ್ಲಿನ ಚಲನಚಿತ್ರ ಪ್ರದರ್ಶನವನ್ನು ರದ್ದು ಮಾಡಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆವತಿಯಿಂದ ಹಳೆ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗ ಪ್ರತಿಭಟನೆಯನ್ನು ನಡೆಸಲಾಯಿತು.

ಮುಖ್ಯಮಂತ್ರಿ ಈ ಬಾರಿ ದಸರಾವನ್ನು ಬಹಳ ಅದ್ದೂರಿಯಾಗಿ ಹಾಗೂ ಏನೂತನವಾಗಿ ಮಾಡುತ್ತೇವೆ. ಈಗ ದಸರಾ ಚಲನ ಚಿತ್ರೋತ್ಸವವನ್ನು ರದ್ದು ಮಾಡಲು ಹೊರಟಿರುವುದು, ಅತ್ಯಂತ ನೋವಿನ ಸಂಗತಿಯಾಗಿದೆ. ಇದು ಸರ್ಕಾರದ ಏಕಪಕ್ಷೀಯ ನಿರ್ಧಾರ ವಾಗಿದ್ದು, ಕನ್ನಡ ಚಿತ್ರರಂಗ ಸ್ಥಳೀಯ ಕಲಾವಿದರು ಹಾಗೂ ಚಲನಚಿತ್ರ ಪ್ರೇಮಿಗಳಿಗೆ ಎಸಗಿರುವ ಘೋರ ಅನ್ಯಾಯವಾಗಿದೆ ಎಂದರು.

ಈ ಕೂಡಲೇ ಮುಖ್ಯಮಂತ್ರಿಗಳು ಎಂದಿನಂತೆ, ಈ ಬಾರಿಯೂ ದಸರಾ ಚಲನಚಿತ್ರೋತ್ಸವ ವನ್ನು ನಡೆಸಬೇಕೆಂದು ಒತ್ತಾಯಿಸಿ ತಮಗೆ ಮನವಿ ನೀಡುತ್ತಿದ್ದೇವೆ. ಇಲ್ಲವಾದ ಪಕ್ಷದಲ್ಲಿ ದಸರಾ ಉದ್ಘಾಟನೆಯ ದಿನವೇ ಸರ್ಕಾರದ ವಿರುದ್ಧ ಉಗ್ರ ಪ್ರತಿಭಟನೆಯನ್ನು ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ನೀಡುತ್ತಿದ್ದೇವೆಂದರು. ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಪ್ರಭುಶಂಕರ್, ಸಿಂದುವಳ್ಳಿ ಶಿವಕುಮಾರ್, ಗಿರೀಶ್, ಶಿವಲಿಂಗಯ್ಯ, ನೇಹಾ, ಮಧುವನ ಚಂದ್ರು, ಮಲ್ಲೇಶ್, ಸೋಮೇಗೌಡ, ಸುಜಾತಾ, ಕುಮಾರ್ ಗೌಡ, ವರಕೂಡು ಕೃಷ್ಣೇಗೌಡ, ಬೋಗಾದಿ ಸಿದ್ದೇಗೌಡ, ಡಾ.ಶಾಂತರಾಜೇಅರಸ್, ರಾಧಾಕೃಷ್ಣ, ಹೊನ್ನೇಗೌಡ, ಪ್ರದೀಪ್, ತ್ಯಾಗರಾಜ್, ನಾಗರಾಜ್, ದರ್ಶನ್ ಗೌಡ, ಗಣೇಶ್ ಪ್ರಸಾದ್, ಹನುಮಂತೇಗೌಡ, ಆನಂದ್ ಗೌಡ ಬಸವರಾಜು, ಚಂದ್ರಶೇಖರ್, ಅರಸು, ದೇವೇಗೌಡ, ರಂಗಪ್ಪ, ನಾಗೇಶ್, ನಾರಾಯಣ್, ರವೀಶ್, ವಿಷ್ಣು ಸೇರಿ ಇನ್ನಿತರರು ಉಪಸ್ಥಿತರಿದ್ದರು.

ಮಾಹಿತಿ ನೀಡದೆ ಸಭೆ: ಆರೋಪ

ನೂರಳೇಶ್ವರ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷರ ವಿರುದ್ಧ ಆರೋಪ

ಸರಗೂರು: ತಾಲೂಕಿನ ನೂರಳೇಶ್ವರ ಮೀನುಗಾರರ ಸಹಕಾರ ಸಂಘದ ವಾರ್ಷಿಕ ಸಭೆಯನ್ನು ಸಂಘದ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಕರಿಗೌಡ ಸೇರಿದಂತೆ ಕೆಲ ಸದಸ್ಯರಿಗೆ ಸಮರ್ಪಕವಾಗಿ ನೋಟಿಸ್ ನೀಡದೆ ನಡೆಸಲು ಮುಂದಾಗಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ವಾರ್ಷಿಕ ಸಭೆಯನ್ನು ಬುಧವಾರ ಚಿಕ್ಕದೇವಮ್ಮನ ತಾಳಬೆಟ್ಟದ ಬಳಿಯ ಗುರುಭವನದಲ್ಲಿ ನಡೆಸಲು ನಿಗದಿಪಡಿಸಲಾಗಿತ್ತು ಎನ್ನಲಾಗಿದೆ. ಆದರೆ, ಸಂಘದ ಅಧ್ಯಕ್ಷ ಮಣಿಕಂಠ ಎಸ್.ಆರ್. ಅವರು ನಿಗದಿತ ಸ್ಥಳದಲ್ಲಿ ಸಭೆ ನಡೆಸದೆ, ಸಂಘದ ಉಪಾಧ್ಯಕ್ಷ ನಿಂಗನಾಯಕ ಅವರ ಜಮೀನಿನಲ್ಲಿರುವ ಛತ್ರದ ಜಾಗದಲ್ಲಿ ಸಭೆ ನಡೆಸಲು ಮುಂದಾಗಿದ್ದಾರೆ ಎಂದು ಸಂಘದ ನಿರ್ದೇಶಕ ಶಿವಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸದಸ್ಯತ್ವ ನೋಂದಣಿ ವಿಚಾರಕ್ಕೆ ಸಂಬಂಧಿಸಿದಂತೆ ಈ ಹಿಂದೆ ಕರಿಗೌಡ ಹಾಗೂ ಸಂಘದ ಆಡಳಿತ ಮಂಡಳಿ ನಡುವೆ ಗಲಾಟೆ ನಡೆದಿತ್ತು. ಈ ಹಿನ್ನೆಲೆಯಲ್ಲಿ ಕರಿಗೌಡ ಅವರಿಗೆ ಸಂಘದ ವತಿಯಿಂದ ನೋಟಿಸ್ ನೀಡಲಾಗಿದೆ ಎನ್ನಲಾಗಿದ್ದರೂ, ವಾರ್ಷಿಕ ಸಭೆಯ ಕುರಿತು ಅವರಿಗೆ ಹಾಗೂ ಕೆಲ ಸದಸ್ಯರಿಗೆ ಸಮರ್ಪಕ ಮಾಹಿತಿ ನೀಡಿಲ್ಲ ಎಂಬ ಆರೋಪ ಕೇಳಿಬಂದಿದೆ.

ಈ ಕುರಿತು ಮಾತನಾಡಿದ ಸಂಘದ ನಿರ್ದೇಶಕ ಶಿವಕುಮಾರ್, ವಾರ್ಷಿಕ ಸಭೆ ನಡೆಯುವ ಸ್ಥಳವನ್ನು ಮೊದಲೇ ನಿಗದಿಪಡಿಸಲಾಗಿತ್ತು. ಆದರೆ, ಸ್ಥಳ ಬದಲಾವಣೆ ಮಾಡಿ ಬೇರೆಡೆ ಸಭೆ ನಡೆಸಲು ಮುಂದಾಗಿರುವುದು ಸರಿಯಲ್ಲ. ಇದನ್ನು ಪ್ರಶ್ನಿಸಲು ಹೋದಾಗ ನಮ್ಮೊಂದಿಗೆ ಗಲಾಟೆಗೆ ಮುಂದಾದರು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸದಸ್ಯರಾದ ಬೈರನಾಯಕ,ವೆಂಕಟನಾಯಕ, ಚನ್ನನಾಯಕ,ಕರಿಗೌಡ,ಸೋಮು, ಶಿವಕುಮಾರ್, ಸಿ ಚಿಕ್ಕೈನ್ನಾಯಕ,ವಾಸು, ಬೈರಪ್ಪ, ಚಿಕ್ಕಣ್ಣ, ಶಿವು ನಾಗ, ನಿಂಗನಾಯಕ, ಶಿವಣ್ಣ, ಸಣ್ಣನಾಯಕ, ಇತ್ತರರು ಹಾಜರಿದ್ದರು.

ಅಧ್ಯಕ್ಷರ ವಿರುದ್ಧ ಗಂಭೀರ ಆರೋಪ

ಇದೇ ವೇಳೆ ಸಂಘದ ಅಧ್ಯಕ್ಷ ಮಣಿಕಂಠ ಎಸ್.ಆರ್. ಅವರ ವಿರುದ್ಧವೂ ಕೆಲ ಸದಸ್ಯರು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಮೀನುಗಾರರ ಸಹ ಕಾರ ಸಂಘದ ಅಧ್ಯಕ್ಷ ಸ್ಥಾನದಲ್ಲಿರುವ ಮಣಿಕಂಠ ಮೀನುಗಾರಲ್ಲ ಆದರೂ ಸಂಘದದಲ್ಲಿ ಕೆಲವು ಸದಸ್ಯ ರಿಗೆ ಹಣ ಹಾಗೂ ಮದ್ಯಪಾನ ಮಾಡಿಸಿ ತಮ್ಮ ಪರ ವಾಗಿ ನಿರ್ಣಯಗಳನ್ನು ಕೈಗೊಳ್ಳುವಂತೆ ಪ್ರಭಾವ ಬೀರು ತ್ತಿದ್ದಾರೆ. ಅಲ್ಲದೆ, ಸಂಘದ ಹಣವನ್ನು ದುರುಪಯೋ ಗಪಡಿಸಿಕೊಂಡಿದ್ದಾರೆ ಎಂಬ ಆರೋಪವನ್ನು ಸದ ಸ್ಯರು ಮಾಡಿದ್ದಾರೆ. ಕೆಲ ಸದಸ್ಯರು ಅಧ್ಯಕ್ಷರಿಗೆ ಹೆದರಿ ಈ ಬಗ್ಗೆ ಮಾತನಾಡದೆ ಮೌನವಾಗಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಸಂಘದ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಬೇಕು. ಸಂಘದ ಹಣದ ಬಳಕೆ ಹಾಗೂ ಅಧ್ಯಕ್ಷರ ಕಾರ್ಯವೈಖರಿ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸಮಗ್ರ ತನಿಖೆ ನಡೆಸ ಬೇಕು. ಆರೋಪಗಳು ಸಾಬೀತಾದಲ್ಲಿ ಅಧ್ಯಕ್ಷ ಎಸ್.ಆರ್.ಮಣಿಕಂಠ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸುವಂತೆ ಸದಸ್ಯರು ಒತ್ತಾಯಿಸಿದ್ದಾರೆ.

ಸಿಇಒ ನೇಮಕದಲ್ಲೂ ಪಾರದರ್ಶಕತೆ ಇಲ್ಲ: ಆರೋಪ

ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಆಯ್ಕೆ ಪ್ರಕ್ರಿಯೆಯ ಬಗ್ಗೆಯೂ ನಿರ್ದೇಶಕ ಶಿವಕುಮಾರ್ ಆಕ್ಷೇಪ ವ್ಯಕ್ತಪಡಿಸಿದರು. "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಮಾಹಿತಿ ನೀಡಿ, ಅಗತ್ಯವಿದ್ದಲ್ಲಿ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ ಅರ್ಜಿ ಆಹ್ವಾನಿಸಬೇಕಾಗಿದೆ. ಆದರೆ, ಇಲ್ಲಿ ನಿಯಮಾನುಸಾರ ಪಾರದರ್ಶಕ ಪ್ರಕ್ರಿಯೆ ನಡೆದಿಲ್ಲ. ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿ ಮಾಡಲಾಗಿದೆ" ಎಂದು ಅವರು ಆರೋಪಿಸಿದರು.

ಅಧಿಕಾರಿಗಳಿಂದ ಪರಿಶೀಲನೆಗೆ ಆಗ್ರಹ

ಸಹಕಾರ ಸಂಘದ ನಿಯಮಾನುಸಾರ ವಾರ್ಷಿಕ ಸಭೆಯ ಕುರಿತು ಎಲ್ಲಾ ಸದಸ್ಯರಿಗೆ ಮುಂಚಿತ ವಾಗಿ ನೋಟಿಸ್ ಹಾಗೂ ಅಗತ್ಯ ಮಾಹಿತಿ ಯನ್ನು ನೀಡಬೇಕು. ಪ್ರತಿಯೊಬ್ಬ ಸದಸ್ಯರಿಗೂ ಸಮಾನ ಅವಕಾಶ ಕಲ್ಪಿಸಬೇಕಾಗಿದೆ. ನಿಯಮಾ ನುಸಾರ ನೋಟಿಸ್ ನೀಡದೆ ಅಥವಾ ನಿಗದಿತ ಕ್ರಮ ಪಾಲಿಸದೆ ಸಭೆ ನಡೆಸಿದಲ್ಲಿ, ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳ ಕಾನೂನುಬದ್ಧತೆಯ ಬಗ್ಗೆಯೂ ಪ್ರಶ್ನೆ ಉದ್ಭವಿಸಬಹುದು ಎಂದು ಸದಸ್ಯರು ತಿಳಿಸಿದ್ದಾರೆ. ಮತ್ತೊಂದೆಡೆ, ಸದಸ್ಯತ್ವ ನೋಂದಣಿ ವಿಚಾರದಲ್ಲಿ ತಮ್ಮೊಂದಿಗೆ ಈ ಹಿಂದೆ ಗಲಾಟೆ ನಡೆದಿರುವ ಹಿನ್ನೆಲೆಯಲ್ಲಿ ಇದೀಗ ಉದ್ದೇಶಪೂರ್ವಕವಾಗಿ ವಾರ್ಷಿಕ ಸಭೆಯ ಮಾಹಿತಿಯನ್ನು ನೀಡದೆ ಕಡೆಗಣಿಸಲಾ ಗುತ್ತಿದೆ ಎಂದು ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಕರಿಗೌಡ ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಸಹಕಾರ ಇಲಾಖೆ ಅಧಿಕಾರಿಗಳು ಸಂಘದ ವಿರುದ್ಧ ಕೇಳಿಬಂದಿರುವ ಆರೋಪಗಳನ್ನು ಸಮಗ್ರವಾಗಿ ಪರಿಶೀಲಿಸಿ, ಸಂಘದ ದಾಖಲೆಗಳು, ಹಣಕಾಸು ವ್ಯವಹಾರ ಗಳು, ಸದಸ್ಯರಿಗೆ ನೀಡಿರುವ ನೋಟಿಸ್ ಹಾಗೂ ಸಿಇಒ ನೇಮಕಾತಿ ಪ್ರಕ್ರಿಯೆಯನ್ನು ಪರಿಶೀಲಿ ಸಬೇಕು. ನಿಯಮ ಉಲ್ಲಂಘನೆಯಾಗಿದ್ದರೆ ಸೂಕ್ತ ಕ್ರಮ ಕೈಗೊಂಡು, ಎಲ್ಲಾ ಸದಸ್ಯರಿಗೆ ಸಮಾನ ಅವಕಾಶ ಕಲ್ಪಿಸಿ ಪಾರದರ್ಶಕವಾಗಿ ವಾರ್ಷಿಕ ಸಭೆ ನಡೆಸಬೇಕು ಎಂದು ಕರಿಗೌಡ ಸೇರಿದಂತೆ ಕೆಲ ಸದಸ್ಯರು ಒತ್ತಾಯಿಸಿದ್ದಾರೆ.

ಮೊದಲ ಪುಟದಿಂದ

ಪರಾರಿಯಾದ ಆರೋಪಿ ಬಂಧನಕ್ಕೆ ಸಿಐಡಿ ಶೋಧ

ನಡೆಸುತ್ತಿದೆ. ಆಕೆಯ ಬಂಧನದ ಬಳಿಕ ಕೆಎಎಸ್ ಅಕ್ರಮ ನೇಮಕಾತಿಯಲ್ಲಿ ಭಾಗಿ ಆಗಿರುವ ಅಭ್ಯರ್ಥಿಗಳ ಮಾಹಿತಿ, ಹಣಕಾಸಿನ ವ್ಯವಹಾರ ಸೇರಿ ಪರೀಕ್ಷಾ ಅಕ್ರಮ ಹೇಗೆ ನಡೆಸಲಾಗಿದೆ ಎಂಬ ಮಾಹಿತಿ ಸಿಗಲಿದೆ.

ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿಗೆ ಹಣ ನೀಡುವ ಮೂಲಕ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಯ ಹತ್ತು ಅಭ್ಯರ್ಥಿಗಳು ಕೆಎಎಸ್ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಮಾಹಿತಿ ಸಿಐಡಿಗೆ ಸಿಕ್ಕಿದೆ. ಆ ಅಭ್ಯರ್ಥಿಗಳ ಮನೆ ಮೇಲು ಸಹ ಸಿಐಡಿ ಅಧಿಕಾರಿಗಳು ದಾಳಿ ನಡೆಸುವ ಸಾಧ್ಯತೆಗಳಿವೆ. ಕೆಪಿಎಸ್‌ಸಿಯ ಒಂದೊಂದೇ ಡೀಲ್‌ಗಳು ಬಹಿರಂಗ ಆಗ್ತಿವೆ. ಪಶುವೈದ್ಯಧಿಕಾರಿ ಬೆನ್ನಲ್ಲೇ ಕೆಎಎಸ್ ಪರೀಕ್ಷಾ ಅಕ್ರಮ ಬಯಲಾಗಿದೆ.

'ಅಕ್ಷಯ' ಜಾರಿಗೆ ಚಿಂತನೆ

ಹೆಚ್ಚು ಮಕ್ಕಳು ಇದ್ದಾರೆ. ಮಕ್ಕಳಿಗಾಗಿ ಕೆಲಸ ಮಾಡುವುದು ದೇವರ ಕೆಲಸ ಮಾಡಿದಂತೆ. ಶಿಕ್ಷಣ ಸಚಿವನಾಗಿ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆ ತರಲು ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ ಎಂದರು.

ಇಡಿಗೆ ದೂರು ಕೊಟ್ಟವರು ಗೊತ್ತಿದೆ

ಕಾರ್ಯಾಚರಣೆಗಳಲ್ಲಿ, ಜಾರಕಿಹೊಳಿ ಕುಟುಂಬ ಅನೇಕ ವಿದೇಶಿ ಸಂಸ್ಥೆಗಳಲ್ಲಿ ಷೇರುಗಳನ್ನು ಹೊಂದಿದೆ ಹಾಗೂ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಿಂದ ಲಂಚ ಪಡೆಯುವಲ್ಲಿ ತೊಡಗಿಸಿಕೊಂಡಿದೆ ಎಂಬ ಅಂಶಗಳು ಬೆಳಕಿಗೆ ಬಂದಿವೆ ಎಂದು ಕೇಂದ್ರ ತನಿಖಾ ಸಂಸ್ಥೆ ತಿಳಿಸಿದೆ. ಆದರೆ, ಅಂತಹ ಯಾವುದೇ ವಿದೇಶಿ ಹೂಡಿಕೆಗಳನ್ನು ಮಾಡಿಲ್ಲ ಎಂದು ಪ್ರತಿಪಾದಿಸಿರುವ ಜಾರಕಿಹೊಳಿ, ಈ ಪ್ರಕರಣವನ್ನು ಕಾನೂನುಬದ್ಧವಾಗಿ ಎದುರಿಸುವುದಾಗಿ ಹೇಳಿದ್ದಾರೆ. ದೂರುದಾರರಿಗೆ ರಾಜಕೀಯ ಬಲವಿದೆಯೇ ಎಂದು ಕೇಳಿದಾಗ, 'ಅಂತಹದ್ದೇನೂ ಇಲ್ಲ' ಎಂದು ಹೇಳಿದರು. ಇವು ಕೇವಲ ಆರೋಪಗಳು. ನನ್ನನ್ನು ನಾನು ಸಮರ್ಥಿಸಿಕೊಳ್ಳಲು ನನಗೆ ಅವಕಾಶಗಳಿವೆ. ನಾನು ಸತ್ಯಾಂಶಗಳನ್ನು ಜಾರಿ ನಿರ್ದೇಶನಾಲಯದ ಮುಂದೆ ಮಂಡಿಸುತ್ತೇನೆ. ತನಿಖೆ ನಡೆಯಲಿ ಮತ್ತು ಸತ್ಯ ಹೊರಬರಲಿ. ಅದರ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಖಾಸಗಿ ಶಾಲೆ ಶಿಕ್ಷಕರಿಗೂ ಪ್ರಶಸ್ತಿ

ಗಮನದಲ್ಲಿದೆ. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಬೆಂಗಳೂರಿನ ಸಂಚಾರ ದಟ್ಟಣೆ ಹಿನ್ನೆಲೆಯಲ್ಲಿ ಶಾಲಾ ಸಮಯ ಬದಲಾವಣೆ ಮಾಡುವಂತೆ ಮನವಿ ಮಾಡಲಾಗಿದೆ. ಈ ಕುರಿತು ವಿವಿಧ ಇಲಾಖೆಗಳೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಖಾಸಗಿ ಶಾಲೆಗಳ ಆರ್‌ಆರ್ ನವೀಕರಣ ಹಾಗೂ ಬೆಂಗಳೂರು ನಗರದಲ್ಲಿ ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ ಮನೆ ಬಾಡಿಗೆ ಭತ್ಯೆಯನ್ನು (ಎಚ್‌ಆರ್‌ಎ) ಬೆಂಗಳೂ

ವಾರಾಂತ್ಯದಲ್ಲಿ 2 ದಿನ ರಜೆಗೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ, ಬ್ಯಾಂಕ್ ಗಳಲ್ಲಿ 5 ದಿನಗಳ ಕೆಲಸದ ವಾರ ಜಾರಿಗೊಳಿಸಲು ಒತ್ತಾಯಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬ್ಯಾಂಕ್ ಒಕ್ಕೂಟಗಳ ಸಂಯುಕ್ತ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ನಂಜನಗೂಡು ರಸ್ತೆಯಲ್ಲಿರುವ ಎಸ್.ಬಿ.ಐ ಕೇಂದ್ರ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಮೆರವಣಿಗೆ ಮೂಲಕ ಸಾಗಿ ಸಂತೇಮರಹಳ್ಳಿ ವೃತ್ತ, ಚಿಕ್ಕಂಗಡಿ ಬೀದಿ ಮಾರ್ಗವಾಗಿ ಸಾಗಿ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಕೆಲಕಾಲ ಧರಣಿ ನಡೆಸಿದರು. ಬಳಿಗೆ ಅದೇ ಮಾರ್ಗವಾಗಿ ಬ್ಯಾಂಕ್ ಬಳಿ ತೆರಳಿ ಪ್ರತಿಭಟನೆ ಮುಕ್ತಾಯಗೊಳಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಸದಸ್ಯ ಪವನ್ ಕುಮಾರ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಬ್ಯಾಂಕ್ ನೌಕರರು ಹೆಚ್ಚಿನ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ವಾರದಲ್ಲಿ ಕೇವಲ ಒಂದು ದಿನ ರಜೆ ಇರುವುದರಿಂದ ನಮ್ಮ ವೈಯಕ್ತಿಕ ಕೆಲಸಗಳನ್ನು ಮಾಡಿಕೊಳ್ಳಲು ಸಮಸ್ಯೆಯಾಗುತ್ತಿದೆ. ಕೇಂದ್ರದ ಆರ್.ಬಿ.ಐ, ಎಲ್‌ಐಸಿ, ನಬಾರ್ಡ್ ಹಾಗೂ ಕೇಂದ್ರ ಸರ್ಕಾರಿ ನೌಕರರಿಗೆ ಇರುವಂತೆ ಬ್ಯಾಂಕ್ ಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ 5 ದಿನಗಳ ಕೆಲಸದ ವಾರ ಜಾರಿಗೊಳಿಸಬೇಕು. ಕೇಂದ್ರ ಸರ್ಕಾರದ ವಿಕಪಕ್ಷೀಯ ಹಾಗೂ ತಾರತಮ್ಯ ಪೂರ್ಣ ಪಿ.ಎಲ್.ಐ ಯೋಜನೆಯನ್ನು ಹಿಂಪಡೆಯಬೇಕು. ಯೂನಿಯನ್ ಗಳೊಂದಿಗೆ ಚರ್ಚಿಸಿ ಸೂಕ್ತ ಬದಲಾವಣೆಯನ್ನು ಮಾಡಬೇಕು ಎಂದು ಒತ್ತಾಯಿಸಿದರು.

ಬ್ಯಾಂಕ್ ಗಳಲ್ಲಿ ಕರ್ತವ್ಯ ನಿರ್ವಹಿಸುವ ನೌಕರರಿಗೆ ಲಾಭಾಂಶದಲ್ಲಿ ಹೆಚ್ಚಿನ ಪಾಲನ್ನು ಕೊಡದೇ ಆಡಳಿತ ಮಂಡಳಿಯವರೇ ಸಿಂಹ ಪಾಲನ್ನು ಪಡೆದುಕೊಳ್ಳುತ್ತಿದ್ದಾರೆ. ಲಾಭಾಂಶದಲ್ಲಿ ಹೆಚ್ಚಿನ ಪಾಲನ್ನು ಬ್ಯಾಂಕ್ ಅಧಿಕಾರಿ ವರ್ಗದವರಿಗೆ ನೀಡಬೇಕು. ಪಿಂಚಣಿ, ಗ್ರಾ್ಯಜುಟಿ ಹಾಗೂ ಇನ್ನಿತರೆ ಸಮಸ್ಯೆಗಳನ್ನು ಬಗೆಹರಿಸಬೇಕು. ಸಾಂಕೇತಿಕವಾಗಿ ಒಂದು ದಿನ ಪ್ರತಿಭಟನೆ ನಡೆಸಲಾಗುತ್ತಿದ್ದು, ನಮ್ಮ ಬೇಡಿಕೆ ಈಡೇರದಿದ್ದರೇ ಸೆ.28,29 ಹಾಗೂ 30 ರಂದು ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ. ಅದಾಗ್ಯೂ ನಮ್ಮ ಬೇಡಿಕೆ ಈಡೇರದಿದ್ದೊದರೇ ಅಕ್ಟೋಬರ್ ನಲ್ಲೂ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಪ್ರಾದೇಶಿಕ ಎಸ್.ಬಿ.ಐ ಅಧಿಕಾರಿಗಳಾದ ಲೋಹಿತ್, ಗೌರವ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ನ ಮಂಜುನಾಥ್, ಯೂನಿಯನ್ ಬ್ಯಾಂಕ್ ನ ಯಶ್ವಂತ್, ಕೆನರಾ ಬ್ಯಾಂಕ್ ನ ವಿಜಯ್ ಹಾಗೂ ಎಲ್ಲಾ ಬ್ಯಾಂಕ್ ಗಳ ಸಿಬ್ಬಂದಿ ವರ್ಗದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಶಿಕ್ಷಕರ ಪಾತ್ರ ಅಪಾರವಾದದ್ದು

ಮೈಸೂರು: ಮುಂದಿನ ನಾಯಕತ್ವವನ್ನು ಹೊತ್ತುಕೊಳ್ಳುವ ಮಕ್ಕಳ ಭವಿಷ್ಯವನ್ನು ರೂಪಿಸುವ ಶಿಕ್ಷಕರ ಪಾತ್ರ ಅಪಾರವಾಗಿದ್ದು, ಮುಂದಿನ ವರ್ಷದಿಂದ ಮೂರು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು ನಿರ್ಧರಿಸಲಾಗಿದೆ ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಹೂಟಹಳ್ಳಿಯ ಸರಸ್ವತಿ ಕನ್ವೆನ್ಷನ್ ಹಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಆಯೋಜಿಸಿದ್ದ ಮೈಸೂರು ತಾಲೂಕು ಶಿಕ್ಷಕರ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಫಲಿತಾಂಶ ಹೆಚ್ಚು ಮಾಡುವುದರ ಜೊತೆಗೆ ಮೈಸೂರು ತಾಲೂಕು ಮೊದಲನೇ ಸ್ಥಾನಕ್ಕೆ ತರಬೇಕು ಎಂದು ಸಂಕಲ್ಪ ಮಾಡಬೇಕು ಎಂದು ಸಲಹೆ ನೀಡಿದರು. ವನ, ಶೌಚಾಲಯ ಮತ್ತು ಶುಚಿತ್ವವನ್ನು ಕಾಪಾಡಿಕೊಂಡು ಶಾಲೆಗಳಿಗೆ ಪ್ರಶಸ್ತಿ ಮತ್ತು ಪುರಸ್ಕಾರ, ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಕಡ್ಡಾಯವಾಗಿ ಕುಡಿಯುವ ನೀರು ಸಿಗುವಂತೆ ಮಾಡುವುದು. ತಾಲೂಕಿನಲ್ಲಿರುವ ಎಲ್ಲಾ ಶಾಲೆಗಳಲ್ಲಿ ಯಾವ್ಯಾವ ರೀತಿಯ ಸಂಗೀತ, ಕಲೆಗಳನ್ನು ಕಲಿಸಲಾಗಿದೆ ಎಂಬುದನ್ನು ಗುರುತಿಸಿ ಪ್ರೋತ್ಸಾಹಿಸಲು ಕಲಾಮಂದಿರದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದರು. ಜಿ.ಪಂ. ಮಾಜಿ ಸದಸ್ಯ ಚಂದ್ರಿಕಾ ಸುರೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ 2025–26ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ 86 ಶಿಕ್ಷಕರನ್ನು ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು, ಶೇ.100ರಷ್ಟು ಫಲಿತಾಂಶ ತಂದು ಕೊಟ್ಟ ಶಾಲೆಗಳಿಗೆ ಸನ್ಮಾನಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್.ಅನಂತರಾಜು, ನಾಗರಾಜು ವಿ. ಭೈರಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಅರುಣ್ಕುಮಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಶಶಿಕುಮಾರ್, ಮಾಳಂಗಿ ಸುರೇಶ್, ಸೋಮೇಗೌಡ ಮುಂತಾದವರು ಇದ್ದರು.

ಇದುವರೆಗೆ 6303 ಮಂದಿಗೆ ನೋಟಿಸ್

ಎಸ್‌ಐಆರ್ । ಜಿಲ್ಲಾಧಿಕಾರಿ ಶ್ರೀರೂಪ

ಚಾಮರಾಜನಗರ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಇದುವರೆಗೆ 7,480 ಮಂದಿಗೆ ನೋಟಿಸ್ ಸಿದ್ಧಪಡಿಸಲಾಗಿದ್ದು, ಇವರಲ್ಲಿ 6,303 ಮತದಾರರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ. ಈ ಪೈಕಿ 2,736 ಮತದಾರರ ವಿಚಾರಣೆ ನಡೆಸಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಪ್ರಕಟಿಸಿರುವ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ಹಕ್ಕು ಮತ್ತು ಆಕ್ಷೇಪಣೆಗಳ ಬಗ್ಗೆ ರಾಜಕೀಯ ಪಕ್ಷಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹನೂರು ವಿಧಾನಸಭಾ ಕ್ಷೇತ್ರದಲ್ಲಿ 679, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ 65, ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 2503, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 3056 ಮತದಾರರು ಸೇರಿದಂತೆ 6303 ಮಂದಿಗೆ ನೋಟಿಸ್ ತಲುಪಿಸಲಾಗಿದೆ. ಈಗಾಗಲೇ 2736 ಮತದಾರರ ವಿಚಾರಣೆ ನಡೆಸಲಾಗಿದೆ. ಇನ್ನು 4744 ಮಂದಿಯ ವಿಚಾರಣೆ ಬಾಕಿ ಇದೆ ಎಂದು ಜಿಲ್ಲಾಧಿಕಾರಿಯವರು ಮಾಹಿತಿ ನೀಡಿದರು. ಸೆಪ್ಟೆಂಬರ್ 1 ರಿಂದ 7ರವರೆಗೆ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಒಟ್ಟು 1644 ಹಕ್ಕು ಆಕ್ಷೇಪಣೆಗಳು ಸಲ್ಲಿಕೆಯಾಗಿವೆ. ಮತದಾರರ ಪಟ್ಟಿಗೆ ಸೇರ್ಪಡೆಗಾಗಿ ನಮೂನೆ 6ರಲ್ಲಿ (ನಮೂನೆ–9) 608 ಅರ್ಜಿಗಳು, ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲು ಕೋರಿ ನಮೂನೆ 7ರಲ್ಲಿ (ನಮೂನೆ–10) 27 ಅರ್ಜಿಗಳು, ಎಪಿಕ್ ಕಾರ್ಡ್ ಬದಲಾವಣೆ, ತಿದ್ದುಪಡಿ, ಅಂಗವಿಕಲರ ಗುರುತಿಸುವಿಕೆಗಾಗಿ ನಮೂನೆ 8ರಲ್ಲಿ (ನಮೂನೆ–11) 895 ಅರ್ಜಿಗಳು, ಸ್ಥಳಾಂತರ, ವಿಧಾನಸಭಾ ಕ್ಷೇತ್ರದೊಳಗೆ ವಿಳಾಸ ಬದಲಾವಣೆಗಾಗಿ ನಮೂನೆ 8ರಲ್ಲಿ (ನಮೂನೆ–11ಎ) 98 ಅರ್ಜಿಗಳು, ಸ್ಥಳಾಂತರ ವಿಧಾನಸಭಾ ಕ್ಷೇತ್ರದ ಹೊರಗೆ ವಿಳಾಸ ಬದಲಾವಣೆಗಾಗಿ ನಮೂನೆ 8ರಲ್ಲಿ (ನಮೂನೆ–11ಬಿ) 16 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ವಿವರ ನೀಡಿದರು. ನಮೂನೆ 6ರಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆಗಾಗಿ ಅರ್ಜಿ ಸಲ್ಲಿಸಬಹುದು. ಯುವ ಮತದಾರರ ಸೇರ್ಪಡೆಗಾಗಿ ಕಾಲೇಜು ಹಂತದಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅರ್ಹ ಮತದಾರರನ್ನು ಕೈಬಿಡಬಾರದು ಎನ್ನುವುದು ಮುಖ್ಯ ಉದ್ದೇಶವಾಗಿದೆ. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳ ಸಹಕಾರ ನೀಡುತ್ತಿದ್ದು, ಮುಂದೆಯೂ ಇದೇ ರೀತಿಯ ಬೆಂಬಲ ನೀಡುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಚುನಾವಣಾ ಶಿರಸ್ತೇದಾರ್ ನಿತ್ಯ, ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎನ್. ನಾಗಯ್ಯ, ಎಸ್. ಬಾಲಸುಬ್ರಹ್ಮಣ್ಯ, ಬಿ.ಎಂ. ಮಹೇಶ್, ಎಸ್. ರಾಮಚಂದ್ರ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಗೋಶಾಲೆಗೆ ಶೀಘ್ರ ಪ್ರಸ್ತಾವನೆ

ಬರ: ಪ್ರಸ್ತಾವನೆ ಸಲ್ಲಿಕೆಗೆ ಜಿಲ್ಲಾಧಿಕಾರಿ ಶ್ರೀರೂಪ ಸೂಚನೆ

ಮುಂಜಾಗ್ರತಾ ಕ್ರಮಗಳು

ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸನ್ನದ್ಧವಾಗಿರಿಸಿಕೊಳ್ಳಬೇಕು ಹಾಗೂ ದುರಸ್ತಿ ಅಗತ್ಯವಿದ್ದರೆ ಕೂಡಲೇ ಸರಿಪಡಿಸಿ ಜನರ ಬಳಕೆಗೆ ಅನುವು ಮಾಡಿಕೊಡಬೇಕು. ಬರ ಸಂದರ್ಭದಲ್ಲಿ ಎದುರಾಗಬಹುದಾದ ಆರೋಗ್ಯ ಸಮಸ್ಯೆಗಳಿಗೆ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಆರೋಗ್ಯ ಇಲಾಖೆ ಅಧಿಕಾರಿಗಳು ವಹಿಸಬೇಕು. ಒಟ್ಟಾರೆ ಜಿಲ್ಲೆಯ ಬರ ಪರಿಹಾರ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಜನರ ನೆರವಿಗೆ ನಿಲ್ಲಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶ್ರೀರೂಪ ಸೂಚಿಸಿದರು.

ಚಾಮರಾಜನಗರ: ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಜಾನುವಾರುಗಳ ಮೇವು ಹಾಗೂ ನೀರಿಗೆ ಸಮಸ್ಯೆಯಾಗದಂತೆ ಗೋಶಾಲೆ ತೆರೆಯಲು ಕೂಡಲೇ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬರ ನಿರ್ವಹಣೆ ಕುರಿತು ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಎಲ್ಲ ತಾಲೂಕುಗಳು ಬರಪೀಡಿತವಾಗಿದ್ದು, ಜಾನುವಾರುಗಳ ಮೇವು ಹಾಗೂ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಎಲ್ಲೆಲ್ಲಿ ಗೋಶಾಲೆ ತೆರೆಯಬೇಕಾದ ಅಗತ್ಯವಿದೆ ಎಂಬ ವಿವರ ಮಾಹಿತಿಯನ್ನೊಳಗೊಂಡ ಪ್ರಸ್ತಾವನೆಯನ್ನು ಕೂಡಲೇ ಸಲ್ಲಿಸುವಂತೆ ಅವರು ಆದೇಶಿಸಿದರು. ಬರ ಮತ್ತು ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ವಿಪತ್ತು ಪ್ರತಿಕ್ರಿಯೆ ನಿಧಿ ಮಾರ್ಗಸೂಚಿಗಳಲ್ಲಿನ ಮಾನದಂಡದ ಆಧಾರದ ಮೇಲೆ ಪರಿಹಾರ ಹಾಗೂ ನೆರವು ಕಾರ್ಯಗಳನ್ನು ಕೈಗೊಳ್ಳಬೇಕಿದೆ. ಬರದಂತಹ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವು, ನೀರು ಹಾಗೂ ಆರೋಗ್ಯಪಾಲನಾ ಸೇವೆಗಳನ್ನು ಒದಗಿಸುವ ಮೂಲಕ ರೈತರಿಗೆ ನೆರವಾಗಬೇಕಿದೆ. ಹೀಗಾಗಿ ಜಿಲ್ಲೆಯ ಯಾವ ಭಾಗದಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚಿದೆ, ಮೇವು ಹಾಗೂ ಕುಡಿಯುವ ನೀರಿಗೆ ಎಲ್ಲಿ ಹೆಚ್ಚು ಅಭಾವ ಕಂಡುಬಂದಿದೆ ಎಂಬ ವಿವರವನ್ನು ಒಳಗೊಂಡಂತೆ ಗೋಶಾಲೆ ತೆರೆಯಬೇಕಾದ ಸ್ಥಳಗಳ ಕುರಿತು ತಕ್ಷಣವೇ ವರದಿ ಹಾಗೂ ಪ್ರಸ್ತಾವನೆ ಕಳುಹಿಸಬೇಕು ಎಂದರು.

ಈ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಪಶುಸಂಗೋಪನೆ ಇಲಾಖೆಯ ಉಪನಿರ್ದೇಶಕ ಡಾ. ಮಂಜುನಾಥ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಇಮ್ಯಾನುವಲ್ ಸಂತೋಷ್, ಕೃಷಿ ಇಲಾಖೆ ಉಪನಿರ್ದೇಶಕ ಭಾಸ್ಕರ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಗಿರೀಶ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ವೆಂಕಟೇಶ್, ಜಿಲ್ಲೆಯ ತಹಶೀಲ್ದಾರರು, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳಾಗಿ ನೇಮಕಗೊಂಡಿರುವ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಡಿಯುವ ನೀರಿನ ಪೂರೈಕೆ, ಅಧಿಕಾರಿಗಳ ಜವಾಬ್ದಾರಿ

ಜನರಿಗೆ ಕುಡಿಯುವ ನೀರಿನ ಅಭಾವವಿರುವ ಪ್ರದೇಶಗಳಲ್ಲಿ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಅಧಿಕಾರಿಗಳಿಂದ ವಿವರ ಪಡೆದ ಜಿಲ್ಲಾಧಿಕಾರಿಯವರು, ಎಲ್ಲಿ ನೀರಿನ ಲಭ್ಯತೆ ಇದೆಯೋ ಅಂತಹ ಕಡೆ ಕೊಳವೆಬಾವಿ ದುರಸ್ತಿ ಇನ್ನಿತರ ಕೆಲಸಗಳನ್ನು ಶೀಘ್ರವಾಗಿ ಕೈಗೊಂಡು ನೀರು ಒದಗಿಸಬೇಕು ಎಂದು ತಿಳಿಸಿದರು. ಟ್ಯಾಂಕರ್‌ಗಳಲ್ಲಿ ನೀರು ಪೂರೈಸುತ್ತಿದ್ದಲ್ಲಿ ಜನರ ಅಗತ್ಯಕ್ಕೆ ತಕ್ಕಂತೆ ನೀರು ಸರಬರಾಜು ಮಾಡಬೇಕು. ಹಬ್ಬವು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳ ಎಲ್ಲಿಯೂ ನೀರಿಗೆ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು. ಕುಡಿಯುವ ನೀರಿನ ಸಮಸ್ಯೆ ಆಲಿಕೆ ಹಾಗೂ ಪರಿಹಾರಕ್ಕಾಗಿ ನಿಯೋಜಿತರಾಗಿರುವ ನೋಡಲ್ ಅಧಿಕಾರಿಗಳು ವ್ಯಾಪಕವಾಗಿ ಕನಿಷ್ಠ ಮೂರು ದಿನಕ್ಕೊಮ್ಮೆ ತಮಗೆ ನಿಯೋಜಿಸಲಾದ ಗ್ರಾಮಗಳಿಗೆ ಭೇಟಿ ನೀಡಬೇಕು. ವಾಸ್ತವ ಪರಿಸ್ಥಿತಿ ಅರಿತು ಸಂಬಂಧಪಟ್ಟ ಎಂಜಿನಿಯರ್ ಹಾಗೂ ಪಿಡಿಓಗಳನ್ನು ಸಂಪರ್ಕಿಸಿ ತಕ್ಷಣವೇ ಸಮಸ್ಯೆ ಪರಿಹಾರ ಮಾಡಬೇಕು. ಪ್ರಸ್ತುತ ಬರ ಸಂದರ್ಭದಲ್ಲಿ ಕುಡಿಯುವ ನೀರು ಪೂರೈಕೆಗೆ ನಿರಂತರ ನಿಗಾ ವಹಿಸಬೇಕು ಎಂದು ಅವರು ಕಟ್ಟುನಿಟ್ಟಾಗಿ ತಾಕೀತು ಮಾಡಿದರು.

ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಶ್ರಮಿಸುವೆ

ಚಾಮರಾಜನಗರ: ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಎಲ್ಲ ಸಹಕಾರದೊಂದಿಗೆ ತಳಮಟ್ಟದಿಂದ ಸಂಘಟಿಸಲು ಶ್ರಮಿಸಲಾಗುವುದು ಎಂದು ನೂತನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಯೋಗೇಶ್ ಹೇಳಿದರು.

ಅವರು ನಗರದ ಸತ್ತಿರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಪ್ರಪ್ರಥಮವಾಗಿ ಭೇಟಿ ನೀಡಿ ಪಕ್ಷದ ಮುಖಂಡರು, ಕಾರ್ಯಕರ್ತರುಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ಮೊದಲ ಬಾರಿಗೆ ಪಕ್ಷದ ಜಿಲ್ಲಾ ಕಚೇರಿಗೆ ಭೇಟಿ ನೀಡಿದ್ದೇನೆ. ಪಕ್ಷದ ಮುಖಂಡರು, ಕಾರ್ಯಕರ್ತರು ಸನ್ಮಾನಿಸಿ ಆತ್ಮೀಯವಾಗಿ ಬರ ಮಾಡಿಕೊಂಡಿದ್ದಾರೆ.ಎಲ್ಲ ಶಾಸಕರು, ಸಂಸದರು, ಸಚಿವರ ಸಹಕಾರದಿಂದ ಇಂದು ಕಾಂಗ್ರೆಸ್ ಅಧ್ಯಕ್ಷರಾಗಿದ್ದೇನೆ. ಕಾರ್ಯಕರ್ತರು ಹೈಕಮಾಂಡ್ ಕೂಡ ಒಪ್ಪಿಗೆ ನೀಡಿ ಅವಕಾಶ ಮಾಡಿಕೊಟ್ಟಿದೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಎಲ್ಲ ವರಿಷ್ಠರು ಅವಕಾಶ ಮಾಡಿಕೊಟ್ಟಿದ್ದಾರೆ.

ಎಲ್ಲರಿಗೂ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಕಾಂಗ್ರೆಸ್ ಜಿಲ್ಲೆಯಲ್ಲಿ ಭದ್ರಕೋಟೆ ಆಗಿದೆ. ಅದನ್ನು ಸದೃಢಗೊಳಿಸುವ ಕೆಲಸವನ್ನು ಜಿಲ್ಲೆಯ ಶಾಸಕರು, ಮಾಜಿ ಶಾಸಕರು, ಸಂಸದರು, ಮಾಜಿ ಅಧ್ಯಕ್ಷರುಗಳು, ಮುಖಂಡರುಗಳು, ಕಾರ್ಯಕರ್ತರುಗಳ ಮಾರ್ಗದರ್ಶನದಲ್ಲಿ ಪಕ್ಷವನ್ನು ಮುನ್ನಡೆಸಿಕೊಂಡು ಹೋಗುವುದಾಗ

ಎಚ್.ವಿ.ರಾಜೀವ್ ಜನ್ಮ ದಿನ: ಸೆ. 16ರಿಂದ 19ರವರೆಗೆ ಸೇವಾ ಕಾರ್ಯ

ಮೈಸೂರು: ಕೆಪಿಸಿಸಿ ಸದಸ್ಯ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸೆ.16ರಿಂದ 19ರವರೆಗೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಸೇವಾ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಬಿ. ಎಲ್.ಭೈರಪ್ಪ ತಿಳಿಸಿದರು.

ಅಗ್ರಹಾರದಲ್ಲಿರುವ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಚ್.ವಿ.ರಾಜೀವ್ ಸ್ನೇಹ ಬಳಗ ಹಲವು ವರ್ಷಗಳಿಂದ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಎಚ್.ವಿ.ರಾಜೀವ್ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ನಾಲ್ಕು ದಿನ ಸೇವಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಸೆ.16ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ವಿದ್ಯಾರಣ್ಯಪುರಂ ಭೂತಾಳೆ ಮೈದಾನದಲ್ಲಿ ಬೃಹತ್ ಉಚಿತ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಿಂದ ಹೃದ್ರೋಗ, ಭಾರತ್ ಕ್ಯಾನ್ಸರ್ ಆಸ್ಪತ್ರೆಯಿಂದ ಕ್ಯಾನ್ಸರ್, ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆಯಿಂದ ಕಣ್ಣು, ಜೆ.ಎಸ್.ಎಸ್. ಆಸ್ಪತ್ರೆಯಿಂದ ದಂತ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ವಾಕ್ ಮತ್ತು ಶ್ರವಣ ದೋಷಗಳು ಸೇರಿದಂತೆ ಎಲ್ಲ ರೀತಿಯ ಆರೋಗ್ಯ ತಪಾಸಣೆ ನಡೆಯಲಿದೆ. ಅದೇ ಸ್ಥಳದಲ್ಲಿ ರಕ್ತದಾನ ಶಿಬಿರವನ್ನೂ ಆಯೋಜಿಸಿದ್ದು, ಸಂಗ್ರಹವಾಗುವ ರಕ್ತವನ್ನು ಜಯದೇವ ಮತ್ತು ಕೆ.ಆರ್. ಆಸ್ಪತ್ರೆಗಳಿಗೆ ನೀಡಲಾಗುವುದು.

ಸಭಾ ಕಾರ್ಯಕ್ರಮವನ್ನು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಕೆ.ಎಸ್. ರಾಜಣ್ಣ ಉದ್ಘಾಟಿಸುವರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಸೇರಿ ಅನೇಕರು ಪಾಲ್ಗೊಳ್ಳುವರು. ವೇದಿಕೆಯಲ್ಲಿ ಕೆ.ಆರ್. ಆಸ್ಪತ್ರೆಗೆ 10 ವೀಲ್ ಚೇರ್‌ಗಳು ಹಾಗೂ 2 ಬ್ಯಾಟರಿ ಆಪರೇಟರ್‌ಗಳ ವೀಲ್ ಚೇರ್‌ಗಳ ವಿತರಣೆ ಮಾಡಲಾಗುವುದು. ಬೀದಿ ಬದಿ ವ್ಯಾಪಾರಿಗಳಿಗೆ ಪ್ರತಿ ವಾರ್ಡಿಗೆ ಒಂದರಂತೆ ಒಟ್ಟು 20 ಮೇಲು ಹೊದಿಕೆಯುಳ್ಳ ತಳ್ಳುಗಾಡಿಗಳನ್ನು ಹಸ್ತಾಂತರ ಮಾಡಲಾಗುವುದು. ಕಿವುಡು ಮತ್ತು ಮೂಗ ವಿದ್ಯಾರ್ಥಿಗಳಿಗೆ ಅಂಬಾರಿ ವಾಹನದಲ್ಲಿ ಮೈಸೂರು ನಗರ ಪ್ರದಕ್ಷಿಣೆ ವ್ಯವಸ್ಥೆ ಮಾಡಲಾಗಿದೆ. ಕನಕಗಿರಿ ಸರ್ಕಾರಿ ಶಾಲೆಗೆ 100 ಚೇರ್‌ಗಳ ವಿತರಣೆ ಮಾಡಲಾಗುವುದು ಎಂದು ವಿವರಿಸಿದರು.

ವಿದ್ಯಾರ್ಥಿಗಳಿಗೆ ಬಾಟಲಿ ವಿತರಣೆ: ಸೆ.17ರಂದು ಮಧ್ಯಾಹ್ನ 3 ಗಂಟೆಗೆ ಕುವೆಂಪು ನಗರದ ಕರ್ನಾಟಕ ಪಬ್ಲಿಕ್ ಶಾಲೆಯ 650 ವಿದ್ಯಾರ್ಥಿಗಳಿಗೆ ಸ್ಟೇನ್ಲೆಸ್ ಸ್ಟೀಲ್ ನೀರಿನ ಬಾಟಲ್ ವಿತರಣೆ ಮಾಡಲಾಗುವುದು. ಜೆಎಸ್‌ಎಸ್ ಶಾಲೆಯ ಸಂಯೋಜನಾಧಿಕಾರಿ ತ್ರಿಪುರಾಂತಕ ಮಕ್ಕಳ ಕುರಿತು ಮಾತನಾಡಲಿದ್ದಾರೆ.

ಮನೆ ಮನೆಗೆ ಹಸಿರು: ಸೆ.18ರಂದು ಬೆಳಗ್ಗೆ 11.30ಕ್ಕೆ ಪ್ಲಾಸ್ಟಿಕ್ ಮುಕ್ತ ಮೈಸೂರು ಆಶಯದೊಂದಿಗೆ ಅದಮ್ಯ ಚೇತನ ಮತ್ತು ಲಯನ್ಸ್ ಫ್ಲೇಟ್ ಬ್ಯಾಂಕ್ ಸಂಸ್ಥೆ ವತಿಯಿಂದ ಜೆ.ಪಿ.ನಗರದ ಅಕ್ಕಮಹಾದೇವಿ ಪ್ರತಿಮೆ ಬಳಿ ಸ್ಥಾಪಿಸಲಾಗಿರುವ ಫ್ಲೇಟ್ ಬ್ಯಾಂಕ್‌ಗೆ 1000 ತಟ್ಟೆ ಮತ್ತು ಲೋಟಗಳ ನೀಡಲಾಗುವುದು. ಮನೆ ಮನೆಗೆ ಹಸಿರು ಕಾರ್ಯಕ್ರಮದ ಮುಂದುವರಿದ ಭಾಗವಾಗಿ ಅಂದು ಸಂಜೆ 4.30ಕ್ಕೆ ಬೆಮೆಲ್ ಆರ್ಚ್ ಸಮೀಪದ ಲೀಸಾ ಸ್ಟೆಪ್ ಶಾಲೆ ಸಮೀಪ ನಾಗರಿಕರಿಗೆ 4000 ಗಿಡಗಳನ್ನು ವಿತರಣೆ ಮಾಡಲಾಗುವುದು. ಹಿರಿಯ ನಾಗರಿಕರಿಗೆ ಸನ್ಮಾನ: ಸೆ.19ರಂದು ಬೆಳಗ್ಗೆ 11ಕ್ಕೆ ಜೆ.ಪಿ.ನಗರದ ಪುಟ್ಟರಾಜು ಗವಾಯಿಗಳ ಮೈದಾನದಲ್ಲಿ ಸುಮಾರು 300ಕ್ಕೂ ಹೆಚ್ಚು ಹಿರಿಯ ನಾಗರಿಕರಿಗೆ ?ಜೀವನೋತ್ಸಾಹ? ಶೀರ್ಷಿಕೆಯಡಿ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಎಚ್.ವಿ.ರಾಜೀವ್ ಸ್ನೇಹ ಬಳಗದ ಜಯಂತ್, ಮುರಳಿ, ಕೆ.ಎಸ್. ರಾಮ್ ಪ್ರಸಾದ್, ವಾಸು ಗೋಷ್ಠಿಯಲ್ಲಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಜೀಪ್ ಡಿಕ್ಕಿ: ಬೈಕ್ ಸವಾರ ಸಾವು

ಗುಂಡ್ಲುಪೇಟೆ: ಜೀಪ್ ಚಾಲಕನ ನಿಯಂತ್ರಣ ತಪ್ಪಿ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟಿದ್ದು, ಹಿಂಬದಿ ಸವಾರ ಗಾಯಗೊಂಡಿರುವ ಘಟನೆ ತಾಲೂಕಿನ ಬಸವಾಪುರ ಗ್ರಾಮದ ಸಮೀಪ ನಡೆದಿದೆ.

ತಾಲೂಕಿನ ಪುತ್ತನಪುರ ಗ್ರಾಮದ ಅಜ್ಜಪ್ಪ (50) ಮೃತ ದುರ್ದೈವಿ. ಅವರೊಂದಿಗೆ ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ಸರ್ವಮಂಗಳ ಎಂಬುವರಿಗೆ ಕೈ ಹಾಗೂ ಕಾಲಿಗೆ ಗಾಯಗಳಾಗಿವೆ.

ಕೇರಳ ಮೂಲದ ಜೀಪ್‌ವೊಂದು ತಾಲೂಕಿನ ಬೊಮ್ಮಲಾಪುರ ಗ್ರಾಮದ ಜಮೀನಿಗೆ ತೆರಳುತ್ತಿದ್ದ ವೇಳೆ ಬಸವಾಪುರ ಗ್ರಾಮದ ಬಳಿ ನಿಯಂತ್ರಣ ತಪ್ಪಿ ಬೈಕ್‌ಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಡಿಕ್ಕಿಯ ರಭಸಕ್ಕೆ ಬೈಕ್ ಸವಾರ ಅಜ್ಜಪ್ಪ ಅವರ ತಲೆಗೆ ಗಂಭೀರ ಪೆಟ್ಟಾಗಿ ತೀವ್ರ ರಕ್ತಸ್ರಾವವಾಗಿತ್ತು.

ಗಾಯಾಳುಗಳನ್ನು ಕೂಡಲೇ ಗುಂಡ್ಲು ಪೇಟೆ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ನೀಡಲಾಯಿತು. ಬಳಿಕ ಗಂಭೀರವಾಗಿ ಗಾಯಗೊಂಡಿದ್ದ ಅಜ್ಜಪ್ಪ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ

ಆಸ್ಪತ್ರೆಗೆ ಕಳುಹಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಗುಂಡ್ಲುಪೇಟೆ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಜೀಪ್ ಹಾಗೂ ಬೈಕ್‌ನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹನೂರಿನಲ್ಲಿ ಬಾಲಕಾರ್ಮಿಕ ತಪಾಸಣೆ

ಹನೂರು: ಪಟ್ಟಣ ವ್ಯಾಪ್ತಿಯ ವಿವಿಧ ಅಂಗಡಿ, ಹೋಟೆಲ್ ಮತ್ತು ವಾಣಿಜ್ಯ ಮಳಿಗೆಗಳಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆನಂದಮೂರ್ತಿ ನೇತೃತ್ವದಲ್ಲಿ ಶನಿವಾರ ದಿಢೀರ್ ತಪಾಸಣೆ ನಡೆಸಲಾಯಿತು.

ಶನಿವಾರ ಬೆಳಿಗ್ಗೆಯಿಂದ ಪಟ್ಟಣದ ಪ್ರಮುಖ ಬೀದಿಗಳು, ಬಸ್ ನಿಲ್ದಾಣ ರಸ್ತೆ, ಕಟ್ಟಡ ಕಾಮಗಾರಿ ಸ್ಥಳಗಳು ಸೇರಿದಂತೆ 50ಕ್ಕೂ ಹೆಚ್ಚು ಅಂಗಡಿ–ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹನೂರು ಪೊಲೀಸ್ ಠಾಣಾ ವ್ಯಾಪ್ತಿಯ ಯಾವುದೇ ಅಂಗಡಿ ಮಳಿಗೆಗಳಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಇರಿಸಿಕೊಳ್ಳಬಾರದು. ಬಾಲ ಕಾರ್ಮಿಕರಿಂದ ದುಡಿಸಿಕೊಳ್ಳುವುದು ಕಂಡು ಬಂದರೆ ಅಂತಹ ಮಾಲೀಕರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರ ಮುಖ್ಯ. ತಮ್ಮ ಸುತ್ತಮುತ್ತ ಬಾಲಕರು ಕೂಲಿ ಕೆಲಸ ಮಾಡುತ್ತಿದ್ದರೆ ಮಾಹಿತಿ ನೀಡಿ, ಮಾಹಿತಿಯನ್ನು ಗೌಪ್ಯವಾಗಿ ಇಟ್ಟು ಮಕ್ಕಳನ್ನು ರಕ್ಷಣೆ ಮಾಡಲಾಗುವುದು ಎಂದರು.

ಬಾಲ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯಡಿ ನಿಯಮ ಉಲ್ಲಂಘಿಸಿದರೆ 6 ತಿಂಗಳಿಂದ 2 ವರ್ಷದವರೆಗೆ ಜೈಲು ಶಿಕ್ಷೆ ಮತ್ತು 20 ಸಾವಿರದಿಂದ 50 ಸಾವಿರ ರೂ.ವರೆಗೆ ದಂಡ ವಿಧಿಸಲಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟರು.

ಈ ವೇಳೆ ಎ. ಎಸ್. ಐ ಶಂಕರ್ ಮುಖ್ಯಪೇದೆಗಳಾದ ಚಂದ್ರು, ಪ್ರಕಾಶ್, ಶಕ್ರುನಾಯಕ್, ಪೇದೆ ಚಂದ್ರಶೇಖರ್ ಸೇರಿದಂತೆ ಇತರರು ಹಾಜರಿದ್ದರು.

ಮನೆ ಬಾಗಿಲಿಗೆ ಸರ್ಕಾರ

ಇಕ್ಬಾಲ್ ಹುಸೇನ್ । ಕೈಲಾಂಚದಲ್ಲಿ ಪ್ರಜಾಸೇವೆ ಆಂದೋಲನ

ರಾಮನಗರ: ನಾಗರೀಕರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ಪ್ರಜಾ ಸೇವೆ ಕಾರ್ಯಕ್ರಮ ತಪ್ಪಿಸಲಿದೆ. ಅಧಿಕಾರಿಗಳು ನೇರವಾಗಿ ಜನರ ಮನೆ ಬಾಗಿಲಲ್ಲೇ ಸಮಸ್ಯೆಗಳನ್ನು ಆಲಿಸುತ್ತಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ ಎಂಬ ಘೋಷವಾಕ್ಯದೊಂದಿಗೆ ಈ ಸೇವೆ ಅರ್ಪಣೆಯಾಗಿದೆ ಎಂದು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ತಾಲೂಕಿನ ಕೈಲಾಂಚ ಹೋಬಳಿ ಕೇಂದ್ರದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಪ್ರಜಾ ಸೇವಾ ಆಂದೋಲನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಗ್ರಾಮಗಳಿಗೆ ಆಗಮಿಸುವ ಅಧಿಕಾರಿಗಳು ಸ್ಥಳದಲ್ಲೇ ಸಾಧ್ಯವಾದಷ್ಟು ಸಮಸ್ಯೆಗಳನ್ನು ಬಗೆಹರಿಸಿ, ಉಳಿದ ಅರ್ಜಿಗಳನ್ನು ನೋಂದಾಯಿಸಿಕೊಂಡು ತ್ವರಿತವಾಗಿ ವಿಲೇ

ಮಣ್ಣಿನ ಮಕ್ಕಳಿಂದ ರೈತರಿಗೆ ಉಪಯೋಗವಿಲ್ಲ

ಕೆ.ರಾಜು ಹೇಳಿಕೆ

ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಕೆ. ರಾಜು ಮಾತನಾಡಿ, ಈ ಕ್ಷೇತ್ರದಿಂದ ಆಯ್ಕೆಯಾಗಿ ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಮಣ್ಣಿನ ಮಕ್ಕಳು ರೈತಪರವಾದ ಯಾವುದೇ ಕಾರ್ಯಕ್ರಮ ರೂಪಿಸಲಿಲ್ಲ. ಆದರೆ, ಕಾಂಗ್ರೆಸ್ ನೇತೃತ್ವದ ರಾಜ್ಯಸರ್ಕಾರ ರೈತರು , ಮಹಿಳೆಯರು ಸೇರಿದಂತೆ ಎಲ್ಲ ವರ್ಗದ ಜನರಿಗೂ ಆರ್ಥಿಕವಾಗಿ ಶಕ್ತಿ ತುಂಬುವ ಕೆಲಸ ಮಾಡಿದೆ ಎಂದು ಹೇಳಿದರು.

ಋಣ ತೀರಿಸುವುದಾಗಿ ಹೇಳಿದ್ದೆವು

ಅಧಿಕಾರದ ಅವಕಾಶ ನೀಡಿದರೆ ಜನರ ಋಣ ತೀರಿಸುವ ಕೆಲಸ ಮಾಡುವುದಾಗಿ ಚುನಾವಣೆಗೆ ಮುನ್ನ ಭರವಸೆ ನೀಡಿದ್ದೇವು. ಕೊಟ್ಟ ಮಾತಿನಂತೆ ನಿಮ್ಮ ಸೇವಕನಾಗಿ ಕೆಲಸ ಮಾಡುತ್ತಿದ್ದೇನೆ. ಒಂದು ದಿನವೂ ರಜೆ ಇಲ್ಲದೆ ಒಂದಲ್ಲ ಒಂದು ರೀತಿಯಲ್ಲಿ ರಾಮನಗರ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇನೆ ಎಂದು ಇಕ್ಬಾಲ್ ಹುಸೇನ್ ಹೇಳಿದರು. ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಏತ ನೀರಾವರಿ ಯೋಜನೆ ಜಾರಿಗೊಳಿಸಲಾಗುತ್ತಿದೆ. ಮೊಟ್ಟೆದೊಡ್ಡಿ ಏತನೀರಾವರಿ ಯೋಜನೆ ಲೋಕಾರ್ಪಣೆಗೊಂಡಿದೆ. ಗಾಣಾಳು, ಕಾಳೇಗೌಡನದೊಡ್ಡಿ ಯೋಜನೆಗಳು ಪ್ರಗತಿಯಲ್ಲಿದ್ದು, ಕೆ.ಪಿ.ದೊಡ್ಡಿಯಲ್ಲಿಯೂ ಯೋಜನೆ ಬೇಕೆಂದು ಬೇಡಿಕೆ ಬಂದಿದೆ ಎಂದರು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ 5 ಕೆಪಿಎಸ್ ಶಾಲೆ ತೆರೆಯಲಾಗುತ್ತಿದೆ. ಕಾರ್ಖಾನೆಗಳ ಸಿಎಸ್ ಆರ್ ಅನುದಾನ ಬಳಸಿಕೊಂಡು ಒಂದೊಂದು ಶಾಲೆಗಳನ್ನು 14 ರಿಂದ 15 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಕೆಪಿಎಸ್ ಶಾಲೆಗಳ ವಿಚಾರದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ರಾಜ್ಯಕ್ಕೆ ಮಾದರಿಯಾಗಿದೆ ಎಂದು ಇಕ್ಬಾಲ್ ಹುಸೇನ್ ತಿಳಿಸಿದರು.

ವಾರಿ ಮಾಡುತ್ತಾರೆ ಎಂದರು. ತಹಸೀಲ್ದಾರ್ ತೇಜಸ್ವಿನಿ, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ. ಬಿ. ಚೇತನ್ ಕುಮಾರ್, ತಾಪಂ ಇಒ ಪೂರ್ಣಿಮಾ, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ತಾಲೂಕು ಅಧ್ಯಕ್ಷ ವಿ. ಎಚ್. ರಾಜು, ಹುಲಿಕೆರೆ ಗುನ್ನೂರು ಗ್ರಾಪಂ ಮಾಜಿ ಅಧ್ಯಕ್ಷ ಗಿರೀಶ್, ಮುಖಂಡರಾದ ಜಯಣ್ಣ, ಭದ್ರಯ್ಯ, ಅಶ್ವತ್ಥ್, ಧನರಾಜು, ರವಿ, ರೇಣುಕಪ್ಪ, ಅಪ್ಪಾಜಣ್ಣ, ರಮೇಶ್, ಕೆಂಪರಾಮು ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಬ್ರಾಹ್ಮಣ ವಧು–ವರಾನ್ವೇಷಣಾ ಸಮಾವೇಶ

ಮೈಸೂರು: ಮರಿಗೆಳಸೂತ್ರ ಫೌಂಡೇಶನ್, ಸಪ್ತಪದಿ ಫೌಂಡೇಶನ್ ಟ್ರಸ್ಟ್ ಹಾಗೂ ಶ್ರೀರಾಮ ಮಂದಿರ ಸಹಕಾರದೊಂದಿಗೆ ವಿವಿಧ ಬ್ರಾಹ್ಮಣ ಸಮುದಾಯದ ಸಂಘಟನೆಗಳ ಜತೆಗೂಡಿ ರಾಜ್ಯ ಮಟ್ಟದ ಬ್ರಾಹ್ಮಣ ವಧು–ವರಾನ್ವೇಷಣಾ ಸಮಾವೇಶವನ್ನು ಸೆ.19 ಹಾಗೂ 20ರಂದು ಎರಡು ದಿನಗಳು ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಮಾತನಾಡಿದ ಮಂಗಳಸೂತ್ರ ಫೌಂಡೇಶನ್ ನ ಶ್ರೀನಿವಾಸ್ ಮಾತನಾಡಿ ನಗರದ ಕೃಷ್ಣಮೂರ್ತಿಪುರಂ ನ್ಯೂ ಕಾಂತರಾಜ ರಸ್ತೆ ಇಲ್ಲಿರುವ ಶ್ರೀರಾಮಮಂದಿರದಲ್ಲಿ ಬೆ.9 ರಿಂದ ಸಂಜೆ 5ರವರೆಗೆ ಸಮಾವೇಶ ಹಾಗೂ ಕಲ್ಯಾಣ ಪ್ರಾಪ್ತಿಗಾಗಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 8088843300, 9449425536 ಸಂಚಾಲಕ ಶ್ರೀನಿವಾಸ್ ಭಾರದ್ವಾಜ್ ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಸಮಾಜಸೇವಕ ಡಾ.ರಘುರಾಮ್ ವಾಜಪೇಯಿ, ಮಾಧವರಾವ್, ಶ್ರೀನಿವಾಸನ್ ಗುರೂಜಿ, ವೇಣುಗೋಪಾಲ್, ರಾಘವೇಂದ್ರ ಪ್ರಸಾದ್, ಬ್ರಾಹ್ಮಣ ಸಂಘಗಳ ಸಂಚಾಲಕ ಶ್ರೀನಿವಾಸ್ ಎಸ್.ಭಾರದ್ವಾಜ್ ಇದ್ದರು.

17ರಂದು ವಿಶ್ವಕರ್ಮ ಜಯಂತಿ

ಮೈಸೂರು: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಸೆ.17ರಂದು ಬೆಳಿಗ್ಗೆ 12ಗಂಟೆಗೆ ನಗರದ ಕಲಾಮಂದಿರದಲ್ಲಿ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿಶ್ವಕರ್ಮ ಜಾಗೃತಿ ವೇದಿಕೆಯ ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ ಹೇಳಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಅಂದು ಬೆಳಿಗ್ಗೆ 9 ಗಂಟೆಗೆ ಕಾಳಿಕಾಂಭ ಕಮಟೇಶ್ವರ ದೇವಸ್ಥಾನದಲ್ಲಿ ವಿಶ್ವಕರ್ಮರ ಭವ್ಯ ಮೂರ್ತಿ ಹೊತ್ತ ಬೆಳರಥಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ವಿಶ್ವಕರ್ಮ ನಿಗಮ ಮಂಡಳಿಯ ಅಧ್ಯಕ್ಷ ಪಿ.ಸುಜ್ಞಾನಮೂರ್ತಿ ಚಾಲನೆ ನೀಡುವರು. ನಂದಿ ಕಂಬ ಪೂಜೆಯನ್ನು ಶಿಲ್ಪಿ ಅರುಣ್ ಯೋಗಿರಾಜ್ ನೆರವೇರಿಸುವರು ಎಂದರು. ಕಾರ್ಯಕ್ರಮದ ಸಾನ್ನಿಧ್ಯವನ್ನು ಕುಮಾರ ಸ್ವಾಮೀಜಿ ವಹಿಸುವರು. ಎಂದು ತಿಳಿಸಿದರು. ವಿಶ್ವಕರ್ಮ ಸೇವಾ ಟ್ರಸ್ಟ್‌ನ ಅಧ್ಯಕ್ಷ ಹುನಗನಹಳ್ಳಿ ನಿಂಗಾಚಾರ್, ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜಯರಾಮಾಚಾರ್, ಕಾಳಿಕಾಂಭ ದೇವಸ್ಥಾನ ಸಮಿತಿ ಅಧ್ಯಕ್ಷ ಪುಟ್ಟರಾಜು, ವಿಶ್ವಕರ್ಮ ನಿವೃತ್ತ ನೌಕರರ ಸಂಘ ಕಾರ್ಯದರ್ಶಿ ಸೋಮಶೇಖರ್ ಹಾಜರಿದ್ದರು.

ಅಣಬೆ ಬೇಸಾಯದಿಂದ ಹೆಚ್ಚುವರಿ ಆದಾಯ

ಮೈಸೂರು: ಅಣಬೆ ಬೇಸಾಯವನ್ನು ಕೇವಲ ಕೃಷಿ ಚಟುವಟಿಕೆಯಾಗಿ ನೋಡದೆ, ಕಡಿಮೆ ಸ್ಥಳ ಮತ್ತು ಕಡಿಮೆ ಬಂಡವಾಳದಲ್ಲಿ ಆರಂಭಿಸಿ ಹೆಚ್ಚುವರಿ ಆದಾಯದ ಮೂಲವನ್ನಾಗಿ ಬೆಳೆಸಿಕೊಳ್ಳಬಹುದಾದ ಉದ್ಯಮವಾಗಿ ಪರಿಗಣಿಸಬೇಕು ಎಂದು ಹಾರ್ಟ್ ಸಂಸ್ಥೆಯ ಸಂಸ್ಥಾಪಕ ಹಾಗೂ ಅಧ್ಯಕ್ಷ ಶಿವಕುಮಾರ ಹೇಳಿದರು.

ಮೈಸೂರಿನ ಹಾರ್ಟ್ ಸಂಸ್ಥೆವತಿಯಿಂದ ಆಯೋಜಿಸಲಾಗಿದ್ದ ಅಣಬೆ ಬೇಸಾಯ ತರಬೇತಿ ಕಾರ್ಯಾಗಾರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು.''ಉದ್ಯೋಗಕ್ಕಾಗಿ ಕಾಯುವುದಕ್ಕಿಂತ, ನಮಗೇ ಉದ್ಯೋಗ ಸೃಷ್ಟಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು. ಮನೆಯಲ್ಲಿರುವ ಸಣ್ಣ ಜಾಗದಿಂದಲೂ

ಬದಲಿ ಕೃಷಿ ಕ್ರಾಂತಿ: "ದೃಢ ಕರ್ನಾಟಕ ಸಂಕಲ್ಪ" ದಡಿ ಸಾಗುತ್ತಿದೆ ಪ್ರಗತಿಯ ರಥ

"ಉಳುವ ಯೋಗಿಯ ನೋಡಲ್ಲಿ" ಎಂಬ ಮಾತಿನಂತೆ ರೈತ ದೇಶದ ಬೆನ್ನೆಲುಬು. ಮಾನವಕುಲಕ್ಕೆ ಅನ್ನ ನೀಡುವ ರೈತ ಕೇವಲ ಜೀವನಾಧಾರವಲ್ಲ, ಇಡೀ ದೇಶದ ಆರ್ಥಿಕತೆಯ ಮೂಲಸ್ತಂಭ. ಪ್ರತಿಯೊಬ್ಬ ಮನುಷ್ಯನ ದೈನಂದಿನ ಆಹಾರದ ಅಗತ್ಯವನ್ನು ಪೂರೈಸುವಲ್ಲಿ ರೈತರ ಪಾತ್ರ ಅಪಾರವಾದದ್ದು.

ಆರ್ಥಿಕತೆ ಮತ್ತು ಸಮಾಜದಲ್ಲಿ ರೈತನ ಪಾತ್ರ ಬಹಳ ಪ್ರಾಮುಖ್ಯವಾಗಿದೆ. ದೇಶದ ಕೋಟ್ಯಂತರ ಜನರಿಗೆ ದಿನನಿತ್ಯದ ಆಹಾರ ಧಾನ್ಯಗಳನ್ನು ಉತ್ಪಾದಿಸಿ ಆಹಾರ ಭದ್ರತೆ ಒದಗಿಸುತ್ತಾನೆ. ಜಿಡಿಪಿಗೆ (ಉಆಕ) ಗಣನೀಯ ಕೊಡುಗೆ ನೀಡುವುದರ ಜೊತೆಗೆ, ಕೈಗಾರಿಕೆಗಳಿಗೆ ಅಗತ್ಯವಿರುವ ಕಚ್ಚಾ ವಸ್ತುಗಳನ್ನು (ಉದಾ: ಹತ್ತಿ, ಕಬ್ಬು) ಒದಗಿಸುತ್ತಾನೆ. ಗ್ರಾಮೀಣ ಭಾರತದಲ್ಲಿ ಶೇಕಡಾ 50 ಕ್ಕಿಂತ ಹೆಚ್ಚು ಜನರಿಗೆ ಕೃಷಿ ಕ್ಷೇತ್ರವೇ ಪ್ರಮುಖ ಉದ್ಯೋಗ ಮೂಲವಾಗಿದೆ.

ರೈತನ ಬದುಕಿಗೆ ಭೂಮಿ ಬುನಾದಿಯಾದರೆ, ನೀರು ಅವನ ಬೆಳೆಯ ಜೀವರಸ. ಜನಸಂಖ್ಯಾ ಸ್ಫೋಟದಿಂದಾಗಿ ಆಹಾರ ಪೂರೈಕೆಯಲ್ಲಿ ಏರುಪೇರು ಉಂಟಾದಾಗ, ಕೃಷಿಗೆ ಆಧುನಿಕ ತಂತ್ರಜ್ಞಾನದ ಸ್ಪರ್ಶ ನೀಡುವುದು ಅತ್ಯಗತ್ಯವಾಯಿತು. ಈ ನಿಟ್ಟಿನಲ್ಲಿ ಕೃಷಿ ತಂತ್ರಜ್ಞಾನ, ನೀರಿನ ಸಮರ್ಥ ನಿರ್ವಹಣೆ ಹಾಗೂ ಆಧುನಿಕ ಯಂತ್ರೋಪಕರಣಗಳ ಬಳಕೆಯ ಮೂಲಕ ರೈತರ ಶ್ರಮಕ್ಕೆ ತಕ್ಕ ಬೆಲೆ ಸಿಗುವಂತೆ ಮಾಡಲು ಹಲವು ರೈತಪರ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ರಾಜ್ಯದಲ್ಲಿ ಸರ್ಕಾರ 100 ದಿನಗಳನ್ನು ಯಶಸ್ವಿಯಾಗಿ ಪೂರೈಸಿದ ಐತಿಹಾಸಿಕ ಸಂದರ್ಭದಲ್ಲಿ, ಸೆಪ್ಟೆಂಬರ್ 10 ರಂದು ಆಯೋಜಿಸಲಾದ ?ದೃಢ ಕರ್ನಾಟಕದ ಸಂಕಲ್ಪ – ಶತಕದ ಪಥ, ಪ್ರಗತಿಯ ರಥ? ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸರ್ಕಾರವು ರಾಜ್ಯದ ಕೃಷಿ ಕ್ಷೇತ್ರಕ್ಕೆ ನೂತನ ಚೈತನ್ಯ ತುಂಬಲು ಹಾಗೂ ರೈತರ ಜೀವನಮಟ್ಟವನ್ನು ಸುಧಾರಿಸಲು ಹಲವು ಮಹತ್ವಾಕಾಂಕ್ಷಿ ಯೋಜನೆಗಳನ್ನು ನಾಡಿಗೆ ಸಮರ್ಪಿಸಿದ್ದಾರೆ.

ಅನ್ನದಾತನ ಸಬಲೀಕರಣಕ್ಕೆ 'ಶತಕದ ಪಥ'ದ ಪ್ರಮುಖ ಕೃಷಿ ಕೊಡುಗೆಗಳು

ಶೂನ್ಯ ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ: ಪ್ರಸಕ್ತ ವರ್ಷದಲ್ಲಿ ರಾಜ್ಯದ ಒಟ್ಟು 28.63 ಲಕ್ಷ ರೈತರಿಗೆ ಶೂನ್ಯ ಹಾಗೂ ತೀರ ಕಡಿಮೆ ಬಡ್ಡಿದರದಲ್ಲಿ ಕೃಷಿ ಸಾಲವನ್ನು ಒದಗಿಸಲು ರೂ. 25,652 ಕೋಟಿ ಅನುದಾನವನ್ನು ಕಾಯ್ದಿರಿಸಲಾಗಿದೆ.

ನೀರಾವರಿ ಯೋಜನೆಗಳಿಗೆ ಆಸರೆ: ?ಅನ್ನ ನೀಡುವ ಭೂಮಿಗೆ ನೀರಿನ ಆಸರೆ' ನೀಡುವ ಉದ್ದೇಶದಿಂದ ಒಟ್ಟು 121 ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇದಕ್ಕಾಗಿ ರೂ. 17,073 ಕೋಟಿ ಹಣವನ್ನು ಮೀಸಲಿಡಲಾಗಿದೆ.

ಕರ್ನಾಟಕ ಸರ್ಕಾರದ "ಅವಕಾಶಗಳ ಹೆದ್ದಾರಿ" ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಹಾಗೂ ಕೃಷಿ ಕ್ಷೇತ್ರದ ಸಮಗ್ರ ಪ್ರಗತಿಗಾಗಿ ಹಲವಾರು ಹೊಸ ಯೋಜನೆಗಳನ್ನು ರೂಪಿಸಲಾಗಿದೆ. ಕೃಷಿಯನ್ನು ಬರೀ ಜೀವನೋಪಾಯವನ್ನಾಗಿ ನೋಡದೆ, ಅದನ್ನು ತಂತ್ರಜ್ಞಾನ ಆಧಾರಿತ ಮತ್ತು ಸುಸ್ಥಿರ ಆದಾಯ ತರುವ

ಉದ್ಯಮವನ್ನಾಗಿ ಪರಿವರ್ತಿಸುವುದು ಈ ನೀತಿಗಳ ಮೂಲ ಉದ್ದೇಶವಾಗಿದೆ. ಸರ್ಕಾರದ ಹೊಸ ಕೃಷಿ ನೀತಿಗಳು, ತಂತ್ರಜ್ಞಾನ ಮತ್ತು ಗ್ರಾಮೀಣ ಜೀವನದ ಸಮ್ಮಿಲನವನ್ನು ಪರಿಚಯಿಸುವ ಪ್ರಮುಖ ಯೋಜನೆಗಳ ವಿವರಣೆ ಇಲ್ಲಿದೆ.

ಮುಖ್ಯಮಂತ್ರಿ ನೇಗಿಲ ಯೋಗಿ ಯೋಜನೆ –

ಯಂತ್ರೋಪಕರಣಗಳ ಬಾಡಿಗೆ ಗೆ ಶೇ. 50 ರಷ್ಟು ಸಹಾಯಧನ: 3 ಎಕರೆವರೆಗೆ ಜಮೀನು ಹೊಂದಿರುವ ಸಣ್ಣ ಮತ್ತು ಮಧ್ಯಮ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯಲು ವಾರ್ಷಿಕ ಗರಿಷ್ಠ ರೂ. 4,500 ರವರೆಗೆ ಸಹಾಯಧನ ದೊರೆಯಲಿದೆ.

ಡಿಜಿಟಲ್ ಬುಕಿಂಗ್ : ರೈತರು ತಮ್ಮ ಮೊಬೈಲ್ ಮೂಲಕವೇ ಅಗತ್ಯ ಯಂತ್ರಗಳನ್ನು ನೇರವಾಗಿ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದ್ದು, ಇದರಿಂದ ಸಮಯ, ಶ್ರಮ ಮತ್ತು ವೆಚ್ಚ ಉಳಿತಾಯವಾಗಲಿದೆ.

ಸಿಎಂ ರೈತ ಚೈತನ್ಯ – ಡಿಜಿಟಲ್ ಕೃಷಿ ಮಿಷನ್ & ತಂತ್ರಜ್ಞಾನ ಅಭಿಯಾನ – ಡ್ರೋನ್ ಮತ್ತು ಉಪಗ್ರಹ ತಂತ್ರಜ್ಞಾನ: ಆಧುನಿಕ ಡ್ರೋನ್ ಹಾಗೂ ಉಪಗ್ರಹ ಆಧಾರಿತ ಬೆಳೆ ಸಮೀಕ್ಷೆ ನಡೆಸಿ ಬೆಳೆಗಳ ವಿಸ್ತೀರ್ಣ, ಬೆಳವಣಿಗೆ ಹಾಗೂ ಕೀಟಬಾಧೆಯ ನಿಖರ ಮಾಹಿತಿಯನ್ನು ರೈತರಿಗೆ ಸಕಾಲದಲ್ಲಿ ನೀಡಲಾಗುತ್ತದೆ.

ಮಾರುಕಟ್ಟೆ ದರಗಳ ನೇರ ಮಾಹಿತಿ: ಮಾರುಕಟ್ಟೆಯಲ್ಲಿನ ನವೀಕರಿಸಿದ ದರಗಳ ಕುರಿತು ಮಾಹಿತಿ ಒದಗಿಸುವುದರಿಂದ ರೈತರು ಬೆಳೆಗಳನ್ನು ಯಾವ ಮಾರುಕಟ್ಟೆಯಲ್ಲಿ ಮತ್ತು ಯಾವ ಸಮಯದಲ್ಲಿ ಮಾರಾಟ ಮಾಡಬೇಕೆಂದು ಸಕಾಲದಲ್ಲಿ ನಿರ್ಧಾರ ಕೈಗೊಳ್ಳಬಹುದು.

ಸಮಗ್ರ ಮಳೆಯಾಶ್ರಿತ ಹಾಗೂ ಶುಷ್ಕ ಪ್ರದೇಶಗಳ ಕೃಷಿ ನೀತಿ – ?ಶುಷ್ಕ ಭೂಮಿಗೆ ಸುಸ್ಥಿರ ಬಲ : ರಾಜಸ್ಥಾನದ ನಂತರ ದೇಶದಲ್ಲೇ ಎರಡನೇ ಅತಿ ದೊಡ್ಡ ಒಣಭೂಮಿ ಹೊಂದಿರುವ ಕರ್ನಾಟಕದಲ್ಲಿ ಜಲಸಂರಕ್ಷಣೆ, ಮಣ್ಣಿನ ಸಾವಯವ ಇಂಗಾಲದ ಮರುಸ್ಥಾಪನೆ ಮತ್ತು ಹವಾಮಾನ ಸ್ನೇಹಿ ಕೃಷಿಗೆ ಒತ್ತು ನೀಡಲಾಗುತ್ತಿದೆ.

ಆದಾಯ ಹೆಗ್ಗಳಿಕೆಗೆ ಮಾರ್ಗ: ಪಶುಸಂಗೋಪನೆ ಹಾಗೂ ವೃಕ್ಷ ಆಧಾರಿತ ಕೃಷಿಯನ್ನು ಉತ್ತೇಜಿಸುವ ಮೂಲಕ ಮಳೆಯಾಶ್ರಿತ ರೈತರಿಗೆ ಪೂರಕ ಆದಾಯ ಸೃಷ್ಟಿಸಲಾಗುತ್ತಿದೆ.

ಗ್ಲೋಬಲ್ ಮಾರುಕಟ್ಟೆಗೆ 'ಕೃಷಿ ರಫ್ತು ಅಭಿಯಾನ'?ಕೆಪೆಕ್ ಸಂಸ್ಥೆಯ ಬಲವರ್ಧನೆ : ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ರಫ್ತಿಗೆ ಹೊಸ ವೇಗ ನೀಡಲು 'ಕೆಪೆಕ್' ಸಂಸ್ಥೆಯನ್ನು ಆರ್ಥಿಕವಾಗಿ ಹಾಗೂ ರಚನಾತ್ಮಕವಾಗಿ ಸಜ್ಜುಗೊಳಿಸಲಾಗುತ್ತಿದೆ.

ವಿಶೇಷ ಉತ್ಪನ್ನಗಳ ರಫ್ತು: ರಾಜ್ಯದ ಮಾವು, ದಾಳಿಂಬೆ, ರಾಗಿ, ಸಿರಿಧಾನ್ಯಗಳು, ಅಕ್ಕಿ ಹಾಗೂ ತೊಗರಿ ಬೇಳೆಗೆ ಗ್ರೇಡಿಂಗ್ ಮತ್ತು ಬ್ರಾಂಡಿಂಗ್ ಸೌಲಭ್ಯ ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಬೆಲೆ ದೊರಕಿಸಲಾಗುತ್ತಿದೆ.

ಪಿಎಂ ಕುಸುಮ್ ? ಸೌರಶಕ್ತಿಯ ಸುವರ್ಣ ಸ್ಪರ್ಶ ?ದಕ್ಷಿಣ ಭಾರತದಲ್ಲೇ ಪ್ರಥಮ : ರಾಜ್ಯದಲ್ಲಿ 1,80,003 ಕ್ಕೂ ಹೆಚ್ಚು ರೈತರ ಪಂಪ್‌ಸೆಟ್‌ಗಳನ್ನು ಸೌರ ವಿದ್ಯುದೀಕರಣಗೊಳಿಸುವ ಮೂಲಕ ಕರ್ನಾಟಕವು ದಕ್ಷಿಣ ಭಾರತದಲ್ಲೇ ಪ್ರಥಮ ಹಾಗೂ ದೇಶದಲ್ಲೇ 5ನೇ ಸ್ಥಾನ ಪಡೆದುಕೊಂಡಿದೆ.

ಉಚಿತ ನೀರಾವರಿ ಸೌಲಭ್ಯ : ರೈತರ ವಿದ್ಯುತ್ ವೆಚ್ಚವನ್ನು ಸಂಪೂರ್ಣ ಕಡಿಮೆ ಮಾಡಿ ನೀರಾವರಿಯನ್ನು ಅತ್ಯಂತ ಲಾಭದಾಯಕವಾಗಿಸಲಾಗಿದೆ.

ತೇಗದ ಸಿರಿ : ದೀರ್ಘಕಾಲೀನ ಆರ್ಥಿಕ ಭದ್ರತೆ ನೀಡುವ ಮರಗಳ ಬೆಳೆಸುವಿಕೆಯನ್ನು ಪ್ರೋತ್ಸಾಹಿಸಲು ?ತೇಗದ ಸಿರಿ? ಯೋಜನೆಯನ್ನು ರೂಪಿಸಲಾಗಿದೆ. ರೈತರು ತಮ್ಮ ಜಮೀನಿನ ರಸ್ತೆಯ ಅಕ್ಕ ಪಕ್ಕ ಅಥವಾ ಖಾಲಿ ಜಾಗಗಳಲ್ಲಿ ತೇಗದಂತಹ ಬೆಲೆಬಾಳುವ ಮರಗಳನ್ನು ಬೆಳೆಸುವ ಮೂಲಕ ಭವಿಷ್ಯದಲ್ಲಿ ಉತ್ತಮ ಆರ್ಥಿಕ ಲಾಭ ಪಡೆಯಬಹುದು. ಇದು ರೈತರ ಆದಾಯ ಹೆಚ್ಚಿಸುವುದಷ್ಟೇ ಅಲ್ಲದೆ, ಪರಿಸರ ಸಮತೋಲನ ಮತ್ತು ಅರಣ್ಯೀಕರಣಕ್ಕೂ ಬೆಂಬಲ ನೀಡುತ್ತದೆ. ರೈತರು ಬೆಳೆಯುವ ಇಂತಹ ತೇಗದ ಮರಗಳಿಗೆ ಶೇಕಡ 70ರಷ್ಟು ರೈತರು ಹಾಗೂ ಶೇಕಡ 30 ರಷ್ಟು ಸರ್ಕಾರ ಬಳಸಿಕೊಳ್ಳಲಿದೆ. ಇದರಿಂದ ರೈತರ ಆರ್ಥಿಕತೆ ಸುಧಾರಿಸುವಲ್ಲಿ ಎರಡು ಮಾತಿಲ್ಲ.

ಮುಖ್ಯಮಂತ್ರಿಗಳ ಆಶಯ: "ಭೂಮಿ, ನೀರು, ಆಧುನಿಕ ತಂತ್ರಜ್ಞಾನ ಹಾಗೂ ನೇರ ಮಾರುಕಟ್ಟೆ ಸಂಪರ್ಕಗಳ ಸಮನ್ವಯದೊಂದಿಗೆ ಪ್ರತಿಯೊಬ್ಬ ರೈತನ ಶ್ರಮಕ್ಕೆ ತಕ್ಕ ಮೌಲ್ಯ ದೊರೆಯಬೇಕು. 'ದೃಢ ಕರ್ನಾಟಕ' ಸಂಕಲ್ಪವು ಬರಿ ಆಡಳಿತದ ಮೈಲಿಗಲ್ಲಷ್ಟೇ ಅಲ್ಲ, ಅದು ಪ್ರತಿಯೊಬ್ಬ ಅನ್ನದಾತನ ಬದುಕಿನಲ್ಲಿ ಹೊಸ ಭರವಸೆ ತರುವ ಸುವರ್ಣ ದಾರಿದೀಪ"ವಾಗಿ ರೈತರ ಬಾಳು ಉಜ್ವಲವಾಗಬೇಕು.

ಸರ್ಕಾರದ ಈ ಎಲ್ಲಾ ನೀತಿ ಮತ್ತು ಮಿಷನ್‌ಗಳು ಕೇವಲ ಯೋಜನೆಗಳಾಗಿ ಉಳಿಯದೆ, ಗ್ರಾಮೀಣ ಕರ್ನಾಟಕದ ಬದುಕನ್ನು ಧನಾತ್ಮಕವಾಗಿ ಬದಲಾಯಿಸುವ ಮಹತ್ವದ ಹೆಜ್ಜೆಗಳಾಗಿವೆ. ತಂತ್ರಜ್ಞಾನ, ರಫ್ತು ಅವಕಾಶ ಹಾಗೂ ಮೂಲಸೌಕರ್ಯಗಳ ಸಮ್ಮಿಲನದಿಂದ ಕೃಷಿ ಕ್ಷೇತ್ರವು ನಿಜವಾದ 'ಅವಕಾಶಗಳ ಹೆದ್ದಾರಿ'ಯಾಗಿ ಹೊರಹೊಮ್ಮುತ್ತಿದೆ.

ವಿಶೇಷ ಲೇಖನ
ವೈ.ಸಿ.ಸಂಪತ್ ಕುಮಾರ್
ಮುಖ್ಯ ವರದಿಗಾರರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಬೆಂಗಳೂರು

ಕೊಡಗಿನಲ್ಲಿ ಪತ್ರಕರ್ತರ ಕ್ರಿಕೆಟ್ ಟೂರ್ನಿಗೆ ಚಾಲನೆ

ಮಡಿಕೇರಿಯಲ್ಲಿ ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿ

ಗೋಣಿಕೊಪ್ಪ ; ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನವೆಂಬರ್ 2 ಮತ್ತು 3 ರಂದು ಮಡಿಕೇರಿಯಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಪತ್ರಕರ್ತರ ಕ್ರಿಕೆಟ್ ಟೂರ್ನಿಯ ಲಾಂಛನವನ್ನು ರಿಪಬ್ಲಿಕ್ ನೆಟ್‌ವರ್ಕ್ ಅಧ್ಯಕ್ಷ ಚೇರಂಡ ಕಿಶನ್ ಮಾದಪ್ಪ ಬಿಡುಗಡೆಗೊಳಿಸಿದರು.

ಪೊನ್ನಂಪೇಟೆಯ ಖಾಸಗಿ ಕ್ಲಬ್ ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೋಗೋ ಅನಾವರಣಗೊಳಿಸಿ ಮಾತನಾಡಿದ ಅವರು, ಕೊಡಗಿನ ಪತ್ರಕರ್ತರು ಸಾಕಷ್ಟು ಕ್ರೀಡಾಕೂಟ ಆಯೋಜಿಸಿಕೊಂಡು ಸಂಘಟಿತಗೊಳ್ಳುತ್ತಿರುವುದು ಮೆಚ್ಚುವ ವಿಚಾರ. ಹಿಂದೆಯೂ ಕೂಡ ಸಾಕಷ್ಟು ಕ್ರೀಡಾಕೂಟಗಳು ನಡೆದಿರುವ ಬಗ್ಗೆ ಮಾಹಿತಿ ಇದೆ. ರಾಜ್ಯಮಟ್ಟದ ಕ್ರಿಕೆಟ್ ಮೂಲಕ ಮತ್ತೆ ಕ್ರೀಡಾ ಚಟುವಟಿಕೆಗೆ ತೋರುತ್ತಿರುವ ಉತ್ಸಾಹ ಮಾದರಿಯಾಗಿದೆ. ಕ್ರೀಡಾಕೂಟಕ್ಕೆ ಅಗತ್ಯ ನೆರವು ನೀಡುವ ಮೂಲಕ ಪ್ರೋತ್ಸಾಹಿಸಲಾಗುವುದು ಎಂದು ಹೇಳಿದರು.

ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಾಚರಣಿಯಂಡ ಅನು ಕಾರ್ಯಪ್ಪ ಮಾತನಾಡಿ, ರಾಜ್ಯದ ವಿವಿಧ ಜಿಲ್ಲಾ ತಂಡಗಳನ್ನು ಸೇರಿಸಿಕೊಂಡು ಕ್ರಿಕೆಟ್ ಟೂರ್ನಿ ನಡೆಸಲು ಯೋಜನೆ ರೂಪಿಸಲಾಗಿದೆ. ಅಗತ್ಯ ಸಿದ್ಧತೆ ನಡೆದಿದೆ. ಸುಮಾರು 20 ಕ್ಕೂ ಹೆಚ್ಚು ಪತ್ರಕರ್ತರನ್ನು ಒಳಗೊಂಡ ತಂಡಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಎಲ್ಲರ ಸಹಕಾರ ಅಗತ್ಯ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಮಾತನಾಡಿ, ಎರಡನೇ ಬಾರಿಗೆ ರಾಜ್ಯಮಟ್ಟದ ಕ್ರಿಕೆಟ್ ಆಯೋಜನೆಯ ಆತಿಥ್ಯವನ್ನು ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ವಹಿಸುತ್ತಿರುವುದು ಹೆಮ್ಮೆಯ ವಿಚಾರ. ಬೇರೆ ಜಿಲ್ಲೆಗಳ ತಂಡಗಳಿಗೆ ಕೊಡಗಿನ ಬಗ್ಗೆ ಮತ್ತಷ್ಟು ತಿಳಿಸಲು ಮತ್ತು ಪರಿಸ್ಥರ ಒಗ್ಗಟ್ಟಿಗೆ ಸಹಕಾರಿ ಎಂದರು.

ಸಂಘದ ರಾಷ್ಟ್ರೀಯ ಸಮಿತಿ ಸದಸ್ಯ ಪಳೆಯಂಡ ಪಾರ್ಥ ಚಿಣ್ಣಪ್ಪ, ಸಂಘದ ಕ್ರೀಡಾ ಸಮಿತಿ ಸಂಚಾಲಕ ಸಂತೋಷ್ ರೈ, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ, ವಿರಾಜಪೇಟೆ ತಾಲೂಕು ಅಧ್ಯಕ್ಷ ರೆಜಿತ್ ಕುಮಾರ್ ಗುಹ್ಯ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ವಿಶ್ವ ಕುಂಬೂರು, ಲಾಂಛನ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.. ಕಿಶೋರ್ ರೈ ಕತ್ತಲೆಕಾಡು ಕಾರ್ಯಕ್ರಮ ನಿರೂಪಿಸಿದರು. ಸಿಂಗಿ ಸತೀಶ್ ಸ್ವಾಗತಿಸಿದರು. ಸುಬ್ರಮಣಿ ವಂದಿಸಿದರು.

ನಶಮುಕ್ತ ಮೈಸೂರು ಅಭಿಯಾನ ಭಿತ್ತಿಪತ್ರ ಬಿಡುಗಡೆ

ಮೈಸೂರು: ಯರ್ಯಂಬೋ ಸ್ಪೋರ್ಟ್ಸ್ ಕರಾಟೆ ಅಕಾಡೆಮಿ ವತಿಯಿಂದ ಸೆ.20ರಂದು ನಡೆಯುವ ನಶಮುಕ್ತ ಮೈಸೂರು ಅಭಿಯಾನ ಜಾಗೃತಿ ಹಾಗೂ ಮಹಿಳಾ ಸ್ವಯಂ ರಕ್ಷಣಾ ತರಬೇತಿ ಶಿಬಿರದ ಪೋಸ್ಟರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅಕಾಡೆಮಿಯ ಪದಾಧಿಕಾರಿಗಳು ಬಿಡುಗಡೆಗೊಳಿಸಿದರು.

ಈ ವೇಳೆ ಯರ್ಯಂಬೋ ಸ್ಪೋರ್ಟ್ಸ್ ಕರಾಟೆ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷ ಯರ್ಯಂಬೋ ಕಿರಣ್ ಮಾತನಾಡಿ, ಅಂದು ಬೆಳಗ್ಗೆ 7 ಗಂಟೆಯಿಂದ ಜೆಪಿ ನಗರದ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಅಭಿಯಾನ ನಡೆಯಲಿದೆ. ಪ್ರಮುಖವಾಗಿ ಮಾದಕ ವಸ್ತುಗಳ ಬಳಕೆ ದೈಹಿಕ ಹಾಗೂ ಮಾನಸಿಕವಾಗಿ ಬೀರುವ ದುಷ್ಪರಿಣಾಮ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಇದಕ್ಕಾಗಿ ಜೆಪಿನಗರದ ಸುತ್ತಮುತ್ತಲಿನಲ್ಲಿರುವ ಎಲ್ಲಾ ಶಾಲಾ–ಕಾಲೇಜಿನ ವಿದ್ಯಾರ್ಥಿಗಳನ್ನು ಇದಕ್ಕೆ ಆಹ್ವಾನಿಸಲಾಗಿದೆ ಎಂದರು. ಅದೇ ಕಾರ್ಯಕ್ರಮದಲ್ಲಿ ಮಹಿಳೆಯರಲ್ಲಿ ಆತ್ಮ ವಿಶ್ವಾಸ ಹೆಚ್ಚಿಸಿ ಯಾವುದೇ ಪರಿಸ್ಥಿತಿ ಎದುರಾದರೂ ಅದನ್ನು ಹೇಗೆ ನಿಭಾಯಿಸಬೇಕು ಹಾಗೂ ಮೂಲಭೂತ ಆತ್ಮರಕ್ಷಣಾ ತಂತ್ರಗಳ ಕುರಿತು ತರಬೇತಿ ನೀಡಲಾಗುವುದು. ಇದಕ್ಕಾಗಿ ಈಗಾಗಲೇ ಸಾಕಷ್ಟು ಮಹಿಳೆಯರು ನೊಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಂ.ಎನ್.ನಟರಾಜ್, ಶಿವರಾಜ್, ಪವಿತ್ರ ಕಿರಣ್, ಅಪೇಕ್ಷ ಇನ್ನಿತರರು ಇದ್ದರು.

ಗಣಪತಿ ಯುವಕರಿಗೆ ಪೊಲೀಸರ ಧಮ್ಕಿಗೆ ಖಂಡನೆ

ಮೈಸೂರು: ರಾಜ್ಯದಲ್ಲಿ ಗಣಪತಿ ಕೂರಿಸಲು ಮುಂದಾಗಿರುವ ಹಿಂದೂ ಕಾರ್ಯಕರ್ತರನ್ನು ಪೊಲೀಸ್ ಇಲಾಖೆ ಕಡಿವಾಣ ಹಾಕಲು ಮುಂದಾಗಿದ್ದು, ತಿ.ನರಸೀಪುರದಲ್ಲಿ ಇನ್ಸ್ಪೆಕ್ಟರ್ ಯುವಕರಿಗೆ ಧಮ್ಕಿ ಹಾಕಿರುವುದು ಖಂಡನೀಯ. ಈ ಕೂಡಲೇ ಸದರಿ ಪೊಲೀಸರ ಅಮಾನತುಗೊಳಿಸಬೇಕೆಂದು ಜಿಲ್ಲಾ ಬಿಜೆಪಿ ಕಾರ್ಯದರ್ಶಿ ದಯಾನಂದ ಪಾಟೀಲ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಗಣಪತಿ ಕೂರಿಸಲು ನೀಡಿರುವ ನಿಯಮಗಳಿಂದ ಈಗಾಗಲೇ ಹಿಂದೂ ಯುವಕರು ತಲೆ ಕೆಡಿಸಿಕೊಂಡಿದ್ದಾರೆ. ಈ ನಡುವೇ ಪೊಲೀಸರು ಸಭೆ ಕರೆ ನೀವು ಈ ರಸ್ತೆಯಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗ ಬೇಡಿ, ಅಲ್ಲಿ ಶಬ್ಧ ಮಾಡಬೇಡಿ ಎಂಬ ನಿಯಮಗಳನ್ನು ಹಾಕುತ್ತಿದ್ದಾರೆ. ಇತ್ತೀಚೆಗೆ ನರಸೀಪುರ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಠಾಣೆಯಲ್ಲಿ ಸಭೆ ಕರೆದು ನೀವು ಮಸೀದಿ ಇರುವ ರಸ್ತೆಯಲ್ಲಿ ಗಣೇಶ ಮೆರವಣಿಗೆ ಮಾಡಬೇಡಿ ಎಂದು ಸೂಚನೆ ನೀಡಿ ಧಮ್ಕಿ ಹಾಕುತ್ತಿದ್ದಾರೆ. ಇಂತಹ ಅಧಿಕಾರಿಗಳನ್ನು ಈ ಕೂಡಲೇ ಇಲಾಖೆಯಿಂದ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗೆಲ್ಲಾ ಹಿಂದೂಗಳ ವಿರುದ್ಧ ಕೆಲಸ ಮಾಡುತ್ತಿದೆ. ಇದೇ ಪೊಲೀಸರು ಮೈಸೂರು ಜಿಲ್ಲೆಯಲ್ಲೆ ಎಗ್ಗಿಲ್ಲದೇ ನಡೆಯುತ್ತಿರುವ ಮಾದಕ ವಸ್ತುಗಳ ಸರಬರಾಜಿನ ಬಗ್ಗೆ ಕಡಿವಾಣ ಹಾಕುವುದಿಲ್ಲ. ತಿ.ನರಸೀಪುರದಲ್ಲಿ ವಿದೇಶಿ ಮಹಿಳೆಯೊಬ್ಬರ ಬಂಧನವಾಯಿತು. ಅದರ ಮುಂದಿನ ತನಿ

ಗಣೇಶ ಚತುರ್ಥಿ ಹಬ್ಬದ ಮಹತ್ವ

। ಗಿರಿಜಾ.ಎಸ್.
ದೇಶಪಾಂಡೆ.
ಬೆಂಗಳೂರು.

ಶುಕ್ಲಾಂಬರದರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪ ಶಾಂತಯೇ॥

ವಿನಾಯಕ ಚೌತಿ ,ಅಥವಾ ವಿನಾಯಕ ಚತುರ್ಥಿ,ಗಣೇಶಚತುರ್ಥಿ ಎಂದು ಕರೆಯಲ್ಪಡುವ ಗಣೇಶನನ್ನು ಬುದ್ಧಿವಂತಿಕೆ,ಸಮೃದ್ಧಿ,ಅದೃಷ್ಟಮತ್ತು ಕೆಟ್ಟದ್ದನ್ನು ನಾಶ ಮಾಡುವ ದೇವರು ಎಂದು ಗೌರವಿಸಲಾಗುತ್ತದೆ.ವಿಘ್ನನಿವಾರಕನೆಂದು ಪೂಜಿಸುತ್ತಾರೆ.ನಮ್ಮ ದೇಶದ ಪ್ರಮುಖವಾದ ಹಬ್ಬಗಳಲ್ಲಿ ಗಣೇಶ ಚತುರ್ಥಿಯೂ ಒಂದು ಸಂಭ್ರಮದ ಹಬ್ಬವಾಗಿದೆ.ಈ ಹಬ್ಬವು ಭಗವಾನ್ ಶಿವ ಹಾಗೂ ಪಾರ್ವತಿ ದೇವಿಯ ಮಗನಾದ ಭಾದ್ರಪದ ಮಾಸದ

ಶುಕ್ಲಪಕ್ಷದಲ್ಲಿ ಜನಿಸಿದ ಭಗವಾನ್ ಗಣೇಶನ ಜನ್ಮವನ್ನು ಸೂಚಿಸುತ್ತದೆ.

ಗಣೇಶನೆಂದರೆ ಮಕ್ಕಳಿಂದ ಹಿಡಿದು ಎಲ್ಲರಿಗೂ ಅಚ್ಚುಮೆಚ್ಚಿನ ದೇವರು.ನಮ್ಮ ದೇಶದಲ್ಲಷ್ಟೇ ಅಲ್ಲದೇ ವಿದೇಶದಲ್ಲೂ ಗಣೇಶ ಚತುರ್ಥಿಯನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ.ಸೂರ್ಯನು ಬುದ್ಧಿತತ್ವಕ್ಕೆ,ಚಂದ್ರನು ಮನಸ್ತತ್ವಕ್ಕೆ ದೇವತೆಯಾದರೆ ಗಣೇಶನ ಆಳ್ವಿಕೆಗೆ ಒಳಪಟ್ಟಿರುವ 21 ತತ್ವಗಳಲ್ಲಿ ಪಂಚಭೂತಗಳು,ಪಂಚಕರ್ಮೇಂದ್ರಿಯಗಳು ,ಪಂಚಜ್ಞಾನೇಂದ್ರಿಯಗಳು,ಪಂಚತನ್ಮಾತ್ರೆಗಳು,ಮನಸ್ಸು ಇವು ಒಳಪಡುತ್ತವೆ.ಅದರಲ್ಲಿ ಮನಸ್ಸನ್ನು ನಾವು ಸಂಯಮದಿಂದ ಒಳಗಿನ ಜ್ಞಾನಾಕಾಶದಲ್ಲಿ ಲಯಗೊಳಿಸಿದರೆ ಗಣೇಶನ ಮಹಿಮೆಯ ಅನುಭವ ಉಂಟಾಗುತ್ತದೆ.

ಗಣೇಶನ ಹುಟ್ಟು: ಯಾಜ್ಞವಲ್ಕ್ಯ ಸ್ಮೃತಿಯ ಪ್ರಕಾರ ಅಂಬಿಕೆಯು ಗಣಪತಿಯ ತಾಯಿ.ಇನ್ನೊಂದು ಕಥೆಯ ಪ್ರಕಾರ ಪಾರ್ವತಿಯ ಮೈಯಿಂದ ಹುಟ್ಟಿದವನು,ಸ್ವರ್ಣಗೌರಿಯ ಮಾನಸಪುತ್ರ ಈತ ಎಂದು ಹೇಳಲಾಗುತ್ತಿದೆ.ಗೌರಿಯು ತನ್ನ ಮೈಗಂಧದಿಂದ ಆಕೃತಿ ಸೃಷ್ಟಿಸಿ ಅದಕ್ಕೆ ಜೀವ ತುಂಬಿ ಸ್ನಾನಕ್ಕೆ ಹೋಗುತ್ತಿರುತ್ತಾಳೆ.ತಾಯಿಯ ಆಣತಿಯಂತೆ ಗಣಪ ಮನೆಕಾಯುತ್ತಿರುತ್ತಾನೆ.ಶಿವನು ಮನೆಗೆ ಹಿಂತಿರುಗಿದಾಗ ಗಣಪ ಅವನನ್ನು ತಡೆದು ಮನೆಯೊಳಗೆ ಹೋಗಲು ಅಡ್ಡ ಪಡಿಸುತ್ತಾನೆ.ಇದರಿಂದ ಕುಪಿತನಾದ ಶಿವ ತ್ರಿಶೂಲದಿಂದ ಅವನ ಶಿರ ಕತ್ತರಿಸುವನು.ಸ್ನಾನ ಮುಗಿಸಿಬಂದ ಗೌರಿ ಮಗನ ಕಳೇಬರ ಕಂಡು ರೋಧಿಸುವದನ್ನು ನೋಡಿ ಶಿವ ತನ್ನ ಗಣಗಳನ್ನು ಕರೆದು ಉತ್ತರ ದಿಕ್ಕಿಗೆ ಯಾರಾದರೂ ತಲೆ ಹಾಕಿ ಮಲಗಿದ್ದರೆ ಅಂತವರ ತಲೆಯನ್ನು ಕತ್ತರಿಸಿ ತರುವಂತೆ ಅಜ್ಞಾಪಿಸುತ್ತಾನೆ.ಅವರು ಉತ್ತರದಿಕ್ಕಿನಲ್ಲಿರುವ ಮಲಗಿದ್ದ ಮರಿಯಾನೆ ತಲೆ ಕತ್ತರಿಸಿ ತರುತ್ತಾರೆ.ನಂತರ ಗಣಪನ ಶರೀರಕ್ಕೆ

ಅಂಟಿಸುತ್ತಾರೆ.ಹೀಗಾಗಿ ಗಣಪ ಗಜಮುಖನಾಗಿ ,ಗಣಗಳ ಅಧಿಪತಿ,ಮೊದಲ ಅಗ್ರಪೂಜೆಗೆ ಅರ್ಹನಾಗುತ್ತಾನೆ.ವಿಘ್ನವಿನಾಶಕ ವಿನಾಯಕನಾಗಿ ಪೂಜಿಸಲ್ಪಡುತ್ತಾನೆ.

ಮೊದಲಿನ ದಿನ ತಾಯಿ ಸ್ವರ್ಣಗೌರಿಹಬ್ಬ ಮಾರನೇಯ ದಿನ ಗಣೇಶಹಬ್ಬ,ತಾಯಿಯನ್ನು ಮರಳಿ ಕರೆದುಕೊಂಡು ಹೋಗುವ ಕೆಲಸ ಗಣೇಶನದಾಗಿರುವದರಿಂದ ತಾಯಿ ಭೂಲೋಕಕ್ಕೆ ಬಂದ

ಮರುದಿನವೇ ಅಜ್ಜಿ ಮನೆಗೆ ಬಂದು ಹಬ್ಬದಂದು ಮಾಡಿದ ವಿವಿಧ ಭಕ್ಷ್ಯ ಭೋಜನಗಳನ್ನು ಭಕ್ಷಿಸಿ ತಾಯಿಯೊಂದಿಗೆ ಹಿಂದಿರುಗುತ್ತಾನೆ.

ಗಣೇಶ ಭೂಲೋಕಕ್ಕೆ ಬಂದ ದಿನವನ್ನು ಸಂಭ್ರಮದಿಂದ ಆಚರಿಸುವದು ಅನಾದಿಕಾಲದಿಂದಲೂ ರೂಢಿಯಲ್ಲಿದೆ. ಅಂದು ದೇಗುಲಗಳಲ್ಲಿ ವಿಶೇಷ ಪೂಜೆ ಮಾಡಲಾಗುತ್ತದೆ.

ಆನೆಯ ಮುಖವುಳ್ಳವನೂ,ಹತ್ತುಬಾಹುಗಳುಳ್ಳವನೂ,ದಯಾವಂತರಲ್ಲಿ ಅಗ್ರಗಣ್ಯನೂ ,ರತ್ನಕಲಶಧರಿಸಿರುವವನೂ ,ಮಂದಹಾಸಬೀರುತ್ತಿರುವನೂ ,ಮದೋದಕದಿಂದ ಕೂಡಿರುವ ಶ್ರೀ ಮಹಾಗಣಪತಿಯು ನಮ್ಮೆಲ್ಲರಿಗೂ ಶಾಶ್ವತವೂ,ದಿವ್ಯವೂ ಆದ ಸುಖವನ್ನು ನೀಡಲಿ.

ಸಾವನ್ನು ಸೋಲಿಸುವ ಸಿಂಪಲ್ ಫಾರ್ಮುಲಾ

ಚಲನಶೀಲ ದೇಹವೆಂದರೆ ತುಕ್ಕು ಹಿಡಿಯದ ಜೀವಯಂತ್ರ. ನಿತ್ಯದ ಭುಜ ಭ್ರಮಣ–ಕಟಿ ವರ್ತುಲಗಳ ಸೂಕ್ಷ್ಮ ವ್ಯಾಯಾಮ ಸೈನೋವಿಯಲ್ ದ್ರವವನ್ನು ಉಕ್ಕಿಸಿ ಮಂಡಿಯ ಕಾರ್ಟಿಲೇಜ್ ಸವೆತ ತಡೆಯುತ್ತದೆ. ನೆಗೆತ–ಕುಪ್ಪಳಿಸುವ ಆಟಗಳಲ್ಲಿ ಆಸ್ಟಿಯೋಬ್ಲಾಸ್ಟ್ ಕೋಶಗಳು ಎಚ್ಚೆತ್ತು ಎಲುಬಿಗೆ ಕ್ಯಾಲ್ಸಿಯಂ ತುಂಬುತ್ತವೆ. ಡ್ಯಾನ್ಸ್–ಜುಂಬಾದ ಲಯಬದ್ಧ ನರ್ತನ ಡೋಪಮೈನ್–ಆಕ್ಸಿಟೋಸಿನ್ ಧಾರೆಯನ್ನು ಮಿದುಳಲ್ಲಿ ಹರಿಸಿ ಆತಂಕದ ಕಾರ್ಮೋಡ ಚದುರಿಸುತ್ತದೆ. ನಿರಂತರ ಚಲನೆಯಿಂದ ಹೀಟ್ ಶಾಕ್ ಪ್ರೋಟೀನ್ ಜಾಗೃತಗೊಂಡು ಜೀವಕೋಶದ ತಪ್ಪು ಮಡಿಕೆ ತಿದ್ದುತ್ತದೆ.

ಚಲನೆಯ ಸಂಭ್ರಮ ಸಮೂಹದಲ್ಲಿ ದ್ವಿಗುಣ. ಉದ್ಯಾನದ ಲಾಫ್ಟರ್ ಕ್ಲಬ್ ಕೈಕಾಲು ಅಲ್ಲಾಡಿಸಿ ನಕ್ಕಾಗ ಬೀದಿಯ ನೀರವತೆ ಭಗ್ನವಾಗುತ್ತದೆ. ಸೈಕಲ್ ಟು ವರ್ಕ್ ಆಚರಿಸುವ ಕಚೇರಿ ಇಂಧನ ಉಳಿಸಿ ಸಿಬ್ಬಂದಿಯ ಬೊಜ್ಜು ಕರಗಿಸುತ್ತದೆ. ಪಂಚಾಯಿತಿಯ ಕೋಲಾಟ–ಡೊಳ್ಳು ಶಿಬಿರ ಮಕ್ಕಳಿಗೆ ಮೊಬೈಲ್ ಮರೆಸಿ ಬೆವರಿಳಿಸುತ್ತದೆ. ಮಾರುಕಟ್ಟೆ ಸ್ವಚ್ಛತಾ ಜಾಥಾದಲ್ಲಿ ಪೌರರು ಕೈಜೋಡಿಸಿದರೆ ಊರಿಗೂ ವ್ಯಾಯಾಮ, ನೆಲಕ್ಕೂ ನೈರ್ಮಲ್ಯ.

ಚಲನೆಯ ಗುಟ್ಟು ಸರಳ. ಮುಂಜಾವಿನಲ್ಲಿ ಅಟ್ಟದ ಮೇಲೆ ಐದು ನಿಮಿಷ ಹಗ್ಗದಾಟ, ಕಚೇರಿಯಲ್ಲಿ ಲಿಫ್ಟ್ ತೊರೆದು ಸೋಪಾನಗಳ ಆಯ್ಕೆ, ಮನೆಗೆಲಸದಲ್ಲೇ ಬಟ್ಟೆ ಪಿಂಡುವುದು–ರಂಗೋಲಿ ಬಿಡಿಸುವ ಸ್ಕಾಯುಸಾಧನೆ. ವಾರಾಂತ್ಯಕ್ಕೆ ಬೆಟ್ಟವೇರುವುದು–ತೋಟದ ಕಳೆ ಕೀಳುವುದು ವಿಟಮಿನ್ ಜಿ ಅರ್ಥಾತ್ ಹಸಿರಿನ ಲಾಭ ನೀಡುತ್ತದೆ.

ದೇಹವನ್ನು ನದಿಯಂತೆ ಹರಿಯಬಿಟ್ಟರೆ ಸಾವಿನ ಕೋಟೆಗೋಡೆಯೇ ಬಿರುಕು ಬಿಡುತ್ತದೆ. ನಿಂತ ನೀರು ಕೊಳೆತಂತೆ ನಿಂತ ದೇಹ ರೋಗಗಳ ಆಗರ. ಚಲನೆಯೇ ಚಿರಾಯುಷ್ಯದ ಮಂತ್ರ, ಬಾಳಿನ ಭದ್ರ ಬುನಾದಿ.

ಅಂಕಣ 20
ಸಾವು ಸಂಕಟಪಡುವ ಸಂಗತಿಗಳು..!

।ಡಾ.ಸುಧಾಕರ.ಜಿ.ಲಕ್ಕವಳ್ಳಿ

ತಮದಾತ್ಮವೇ ಜ್ಯೋತಿ

ಮುದ್ದುರಾಮನ ಅರಿವು ಭಾಗ- 5

ಡಾ. ಪ್ರದೀಪಕುಮಾರ ಹೆಬ್ರಿ
98440 18457

**ವಿಷಯ ಹಿಂಗದೆ ಬರಿದೆ ತಲೆ ಬೋಳಾದರೇನು?
ಅಡ್ಡನಡೆಯಿದ್ದು ತೊಟ್ಟರೇಂ ಪಾದುಕೆಯ?
ಪಕ್ವವಾಗದೆ ಮನಸು ತೊಟ್ಟರೇಂ ಕಾಷಾಯ?
ಸುಲಭವೇ ಸಾಧುತನ?– ಮುದ್ದುರಾಮ**

ನಮ್ಮ ಬದುಕಿನಲ್ಲಿ ನೋವು– ನರಳುವಿಕೆ, ನಲಿವು– ಅರಳುವಿಕೆ ಸಹಜವಾದುದು. 'ಮನಸ್ಸಿದ್ದಲ್ಲಿ ಮಾರ್ಗವಿದೆ' ಮಾತ ಕೇಳಿರುವ ನಾವು 'ಮೈ ಇದ್ದಲ್ಲಿ ಬೇನೆಯಿದೆ' ಎಂಬುದನ್ನೂ ತಿಳಿದಿರಬೇಕು. ನಮ್ಮ ಸುತ್ತಮುತ್ತಲು ಹರವಿಕೊಂಡಿರುವ ವಸ್ತುಗಳತ್ತ ಲಕ್ಷ್ಯ ಹರಿಸಿದರೆ ಮಾತ್ರ ಅವುಗಳ ಇರುವಿಕೆಯ ಅರಿವು ನಮಗಾಗುವಂಥದ್ದು. ನೋವು, ನಲಿವು ಎಂದರೆ ಹಾಗೆಯೇ! 'ಕಾಸಿಗೆ ತಕ್ಕ ಕಜ್ಜಾಯ' ಮಾತಿನನುಸಾರ ಮಾಡಿದ ಕೆಲಸಗಳಿಗನುಸಾರ ಫಲಿತಾಂಶ! ತಲೆಮೇಲೆ ಮಣಭಾರದ ಚೀಲವನ್ನೇರಿಸಿದರೆ ಹೊರಲು ಕಷ್ಟ. ಅದರಂತೆ ಸುಜ್ಞಾನ ಚಿಂತನೆಗಳು ತಲೆಯನ್ನು ಅಲಂಕರಿಸದಿದ್ದರೆ ತಲೆ ಭಾರ ತುಂಬಲಾಗದ ರೀತಿಯಲ್ಲಿ ಬೋಳಾದರೆ ಯಾವ ಪ್ರಯೋಜನವೂ ಇಲ್ಲ. ನಮ್ಮೀ ಜಗತ್ತಿನಲ್ಲಿ ಲೌಕಿಕ ಸಂಪಾದನೆಯ ಆಸೆ ಇರುವವರಿಗೆ ಕಾಣಿಸುವುದು ತಿಜೋರಿ ತುಂಬಿಸುವ ವಸ್ತು, ವ್ಯಾಪಾರ ಮಾತ್ರ. ಆದರೆ ಅಲೌಕಿಕ ಸಂಪಾದನೆಯ ಆಸೆ ಇರುವವರಿಗೆ ಕೇಳಿದ, ಓದಿದ ಅಪೂರ್ವ ವಿಷಯಗಳು ಮನವನ್ನು ಪಕ್ವವಾಗಿಸುತ್ತ ತಮದಂತ್ಯವೇ ಜ್ಯೋತಿ ಎಂಬುದನ್ನು ಸಾಬೀತು ಪಡಿಸುತ್ತದೆ.

ನಮ್ಮ ಬದುಕು ಘಮಭರಿತ ಹೂವಾಗಿ ಅರಳಬೇಕು. ಹೀಗೆ ಅರಳಬೇಕಾದರೆ ಸುಖದ ಪಥ ಎಂಬುದರ ಅರಿವಿರಬೇಕು. ಹೊರವೇಷದಲಿ ನಾವು ಹೇಗೇ ಕಂಡರೂ ಅಂತರಂಗದಲ್ಲಿ ಒಳಿತು– ಕೆಡುಕುಗಳ ನಿಲುವಿರಬೇಕು. ಇದಕ್ಕೆ ಅನಿವಾರ್ಯವಾಗಿ ಬೇಕಾದುದು ಚಿತ್ತದಲಿ ಬೆತ್ತಲೆಯ ಭಾವ. ನಿಜದರಿವು ಇರದಿರುವ ಬರಿ ಬರಡು ಮಾತಿಂದ ಏನು ಮಾಡಲೂ ಸಾಧ್ಯವಿಲ್ಲದಿರುವಾಗ ಲೌಕಿಕ ಬಯಕೆಗಳ ಹಿಡಿತದ ಬಂಧಿ ಆಗದಿದ್ದಿರಲು ಆಸೆ ದೂರ. ಆಸೆ ದೂರವಾದಾಗ ತಳಮಳದ ಸುಳಿವಿರುವುದಿಲ್ಲ. ಬಯಕೆಗಳ ಮೋಹಪಾಶಕ್ಕೆ ಸಿಲುಕದಿದ್ದರೆ ಸುಪ್ರಜ್ಞೆಯ ಅಧೀಶರಾಗುತ್ತೇವೆ. ಆಗಲೇ ಆತ್ಮನರಿವು. ಸದಾ ಒಳ್ಳೆಚಾರಗಳ ಚಿಂತನೆಯಲ್ಲಿದ್ದು ಲೌಕಿಕ ಮೋಹದ ದಾಸರಾಗದಿದ್ದರೆ ಸುಪ್ರಜ್ಞೆಯ ಬೆಳಗುವಿಕೆ. ಅದೇ ಬಯಕೆ ಬಿಡುಗಡೆ ಬೆಳಕು.

ನಾವು ತಿಳಿಯಬೇಕಾದುದು ಬಹಳಷ್ಟಿದೆ. ಅರಿವು ಎನುವ ಸಾಗರದ ಮುಂದೆ ನಾವೊಂದು ಕಿರುಹನಿ. ಜ್ಞಾನಗಿರಿ ತಪ್ಪಲಲಿ ನಾವೊಂದು ಹುಲ್ಲಿನೆಸಳು. ನಾವೇನು ಮಾಡಬೇಕೆನುವ ಗುರಿ ಮೊದಮೊದಲು ಅಸ್ಪಷ್ಟ. ಸಮಯ ಉರುಳಿದಂತೆ ಅದಕ್ಕೊಂದು ನಿಶ್ಚಿತರೂಪ. 'ನಾನು' ಎಂಬಹಮಿಕೆ ಮಿನುಗಿದರೆ ಅರಿವಾಗುವುದು ಸಾಧನೆಯ ಶಿಖರದೆತ್ತರದಲ್ಲಿ ನನ್ನನ್ನು ನಾನು ಕಾಣಹೊರಟಾಗ ನಾನು ಬರಿ ಶೂನ್ಯ ಎಂದು! ನಾವು ಮಾಡಿದ ಕೆಲಸಗಳನ್ನೆಲ್ಲರೂ

ಒಪ್ಪಲೇ ಬೇಕೆಂದಿಲ್ಲ. ಎಲ್ಲವೂ ಅವರರಿವಿಗೆ ಬರುವುದು ಅವರವರ ಇಚ್ಛೆಯನುಸಾರ. ಎಲ್ಲವೂ 'ಪೂರ್ಣತ್ವ'ದಿಂದ ರಾರಾಜಿಸಬೇಕೆಂದಿಲ್ಲ. ಎದುರಿಸುವ ಆರೋಪ, ಅವಿದ್ಯೆ, ಅಜ್ಞಾನ ಎಲ್ಲದಕ್ಕೂ ಶಬ್ದಾತೀತರು, ರೂಪಸ್ಪರ್ಶಾತೀತರು ನಾವಾದಾಗ ಮಾತ್ರ ನಮ್ಮರಿವಿಗೆ ಬರುವುದು ಬ್ರಹ್ಮವೆಂದರೆ ಶೂನ್ಯ ಎಂದು! ಇದನ್ನು ಅರಿತಂತೆ ಆತ್ಮನರಿವು.

"ನಾವು ಎಳೆಯರು ನಾವು ಗೆಳೆಯರು ಹೃದಯ ಹೂವಿನ ಹಂದರ" ಮಾತಿನನುಸಾರ ನಾವರಿಯಬೇಕಾದುದು,ನಾ ಬೇರೆ ನೀ ಬೇರೆ ಎಂದಾಗ ಇಮ್ಮನವೊ? ನಾನು ನೀನಾದಾಗ ಎದೆಬಡಿತವಿಲ್ಲ ಎಂದು. ಈ ಅರಿವೇ ' ಕೂಡಿ ಬಾಳಿದರೆ ಸ್ವರ್ಗಸುಖ ' ಎಂಬುದಕ್ಕೆ ಪರ್ಯಾಯವಾದ ಮಿಲನ ಬಯಲಿನ ಯಾನ ಎಂದಾಗುತ್ತದೆ. ಹೀಗಾದಾಗ 'ಹೊರ ರೂಪ ಮುಖ್ಯವಲ್ಲ, ಅಂತರಂಗದರಿವೇ ಮುಖ್ಯ' ಎಂದಾಗಿ ' ನಾನೇ ನೀನು' ಎಂದು ದನಿಸುತ್ತದೆ. ಇದೇ ಬದುಕ ಸಂಯೋಗ. ಇದೇ ಆತ್ಮನರಿವು.



ನೋವಿಗಿದಯೇ ಪರಿಹಾರ

। ಸ್ನೇಹಾ ಆನಂದ್

ಒಡೆದ ಒಂದು ಗ್ಲಾಸನ್ನು ಜೋಡಿಸುವ ಸಾಧ್ಯತೆಯೇ ಇಲ್ಲ ನಿಜ! ಆದರೆ ಆ ಚೂರುಗಳ ಜೊತೆಗೆ ಜೀವಿಸಲು ವ್ಯಕ್ತಿ ಕಲಿತು ಬಿಡುತ್ತಾನೆ ಅಷ್ಟೇ!

ಮೊನ್ನೆ ನನ್ನ ಆತ್ಮೀಯರೊಬ್ಬರು ಹೇಳಿದ ಮಾತಿದು! ವೈಯಕ್ತಿಕ ಬದುಕು ಅತೀವ ವೇದನೆ ಕೊಟ್ಟರೆ ಒಡೆದ ಹೃದಯವನ್ನು ಮತ್ತೆ ಮತ್ತೇ ತೇಪೆ ಹಾಕಿಸುತ್ತಾ ಎಷ್ಟಾಗುತ್ತೋ ಅಷ್ಟು ದಿನ ಬದುಕುವುದು ಅಷ್ಟೇ, ಎಂದರು ನೊಂದ ಮನಸ್ಸಿನಿಂದ, ಅವರ ಮಾತಿಗೆ ನನ್ನ ಮನಸ್ಸು ಭಾರವಾಯಿತು!

ಅವರು ಹೇಳಿದ್ದು ನಕಾರಾತ್ಮಕ ಮಾತಾದರೂ ವಾಸ್ತವ ಬದುಕಿನಲ್ಲಿ ಇದು ನಿಜವಾದ ಮಾತಲ್ಲವೇ! ನಾವು ಪ್ರೀತಿಸುವವರನ್ನು ದ್ವೇಷಿಸಲು ಸಾಧ್ಯವೇ ಇಲ್ಲ ಎಂದಾಗ, ಆ ಸಂಬಂಧಗಳಿಗೆ ಕಡಿವಾಣ ಹಾಕಬಹುದು ಹೊರತು ಅವರ ಜೊತೆಗಿರುವ ಅನುಬಂಧ , ಸಂಬಂಧಗಳಿಂದ ನಮ್ಮ ಮನಸ್ಸಿನ ಭಾವನೆಗಳಿಗೆ ಎಂದಿಗೂ ಕಡಿವಾಣ ಹಾಕಲು ಸಾಧ್ಯವಾಗುವುದೇ ಇಲ್ಲ! ಹೀಗಾಗಿ ಅದೇ ನೋವಾಗಿ ಮನವನ್ನು ಸೇರಿ ಹೃದಯಕ್ಕೆ ವೇದನೆಯಾಗಿ ಮಾರ್ಪಾಡಾಗುತ್ತದೆ!!

ಆದರೆ ಆ ನಮ್ಮ ನೋವಿಗೆ ಅವರ ಕಡೆಯಿಂದ ಏನೂ ಸಮಾಧಾನ ಸಿಗದಿದ್ದರೆ ಆಗ ಪರಿಹಾರವೇ ಇಲ್ಲವಾಗಿ ನಾವು ಅದನ್ನು ಮರೆತು ಬದುಕಲು ಪ್ರಯತ್ನಿಸುವುದು ಒಂದು ಪರಿಹಾರವೇ ಹೊರತು ಬೇರೆ ದಾರಿಯೇ ಇರುವುದಿಲ್ಲ!

ಎಲ್ಲರ ಜೀವನದಲ್ಲಿ ಅವರದೇ ಆದ ಒಂದು ಕಥೆ, ಮನೋವ್ಯಥೆ ಇದ್ದೇ ಇರುತ್ತದೆ, ಅದೇ ನಮ್ಮ ವಿವಿಧ ಪರಿಸ್ಥಿತಿಗೆ ಕಾರಣವಾಗುತ್ತದೆ!

ದುಡ್ಡಿದ್ದ ಮಾತ್ರಕ್ಕೆ ಎಲ್ಲರೂ ಸುಖಿಗಳಲ್ಲ, ಜೀವನದ ಹಾದಿ ಸುಗಮವಾಗಿ ಸಾಗಿದರೆ ಮಾತ್ರ ಅಳಿದುಳಿದ ಬದುಕು ನೆಮ್ಮದಿ ಪಡೆಯುವುದು!

ಬದುಕಿನ ಜಂಜಾಟಗಳು ಬಿಡಿಸಲಾರದ ದಾರದಂತೆ ಸಿಕ್ಕಾದರೆ ಆ ಸಿಕ್ಕೇ ಹೃದಯದ ಮೇಲೆ ದಾಳಿ ಮಾಡಿ ಹೃದಯಸ್ತಂಭನಕ್ಕೆ ಕಾರಣವಾಗುತ್ತದೆ!

ಎಲ್ಲರಿಗೂ ಎಲ್ಲ ರೀತಿಯ ಕಷ್ಟಗಳನ್ನು, ನೋವುಗಳನ್ನು ತಡೆದುಕೊಳ್ಳುವ ಆತ್ಮಸ್ಥೈರ್ಯ ಕ್ಷಮತೆ ದೇವರು ಕೊಟ್ಟಿರುವುದಿಲ್ಲ

ಒಬ್ಬೊಬ್ಬರು ಕಷ್ಟ, ನೋವುಗಳನ್ನು ದಾಟಿ ಸಾವನ್ನು ಗೆದ್ದು ಬರುವ ಆತ್ಮವಿಶ್ವಾಸ ಹೊಂದಿದ್ದರೆ, ಒಬ್ಬೊಬ್ಬರು ಬದುಕಿನ ಕಷ್ಟಗಳಿಗೆ ತಲೆ ಒಡ್ಡಲಾರದೆ ಕುಸಿದು ಹೋಗುತ್ತಾರೆ, ಅದು ಅವರವರ ಮನಸ್ಥಿತಿಗೆ ಸಂಬಂಧ ಪಟ್ಟಿದ್ದು!

ಸ್ನೇಹ ಲೋಕ

ಹೊರಗಡೆ ಜೀವನದಲ್ಲಿ ನಗುತ್ತಾ ಮಾತಾನಾಡಿದರೂ ನೋವನ್ನು ನುಂಗಲಾರದ ಸ್ವಭಾವದವರಾಗಿದ್ದರೆ ಆತ್ಮಸ್ಥೈರ್ಯ ಇಲ್ಲದವರಾಗಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ, ಆದರೆ ಗಟ್ಟಿಯಾದ ಆತ್ಮಸ್ಥೈರ್ಯ ಹೊಂದಿದವರು ಪರಿಸ್ಥಿತಿಗೆ ಹೊಂದಿಕೊಂಡು ಬಾಳಲು ಕಲಿಯುತ್ತಾರೆ!

ಆದರೆ ಯಾರ ಹೃದಯ ಎಷ್ಟು ನೋವುಗಳನ್ನು ಭರಿಸುವ ಶಕ್ತಿ, ಸ್ಥಳ ಹೊಂದಿದೆ ಎಂದು ಯಾರಿಗೂ ಗೊತ್ತಿರುವುದಿಲ್ಲ, ಹೀಗಾಗಿ ಹೃದಯ ಸ್ತಂಭನಕ್ಕೆ ಈ ವೇದನೆಯೂ ಕಾರಣವಾಗಬಹುದು! ಒಂದೊಂದು ಬಾರಿ ಹೇಳುತ್ತೇವೆ, ನಿನ್ನೆ ತಾನೇ ಅವರನ್ನು ನೋಡಿದ್ದೆ ಎಷ್ಟು ಚೆಂದ ನಗುನಗುತ್ತಾ ಮಾತನಾಡಿದವರು ಇವತ್ತು ಇಲ್ಲವೆಂದರೆ ನಂಬಲು ಸಾಧ್ಯವೇ ಇಲ್ಲ ಎನ್ನುತ್ತಾರೆ! ಅಂದರೆ ಅವರ ಹೃದಯ ನಿಲ್ಲುವ ಸೂಚನೆಯನ್ನು ಯಾರಿಗೂ ಕೊಟ್ಟಿರುವುದೇ ಇಲ್ಲ!

ಹೀಗಾಗಿ ಈ ನೋವು, ವೇದನೆ , ಸಂಕಟ, ಕಷ್ಟ ತಳಮಳ ಎನ್ನುವ ಎಲ್ಲಾ ಸಮ ಪದಗಳು ಪ್ರತಿ ಮನುಷ್ಯನ ಜೀವನದಲ್ಲಿ ರಕ್ತ ಹೀರುವ ಜಿಗಣೆಯಂತೆ! ಪ್ರತಿಯೊಬ್ಬ ಜೀವಿಯ ಈ ಎಲ್ಲಾ ವೇದನೆಗೆ ಮುಕ್ತಿ ಕೊಟ್ಟು, ಸಂತೋಷ ನೆಮ್ಮದಿ ಸಿಗಲು ಆ ಭಗವಂತನ ಕೃಪೆ ಇದ್ದರೆ ಮಾತ್ರ ಸಾಧ್ಯ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,